ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 6 ಫೆಬ್ರವರಿ 7, 1988 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ತ್ರಿಪುರಾ ವಿಧಾನಸಭೆ ಚುನಾವಣೆ ಪಾಲಿಟ್ ಬ್ಯೂರೋ ಹೇಳಿಕೆ

ಭಯೋತ್ಪಾದಕ ರಾಜಕೀಯದ ವಿಜಯ

ಮುಸಿ ಬಳೆಯುವ ಅಪಪ್ರಚಾರ, ಸಂಘಟಿತ ಕೊಲೆಯ ಪ್ರಯತ್ನಗಳ ಮೂಲಕ ಮತದಾರರನ್ನು ಬೆದರಿಸಲು ಎಲ್ಲಾ ರೀತಿಯ ಪ್ರಯತ್ನ ನಡೆದರೂ ಶೇ.50 ಕ್ಕಿಂತಲೂ ಹೆಚ್ಚು ಮತದಾರರು ಸಿಪಿಐ[ಎಂ]ಗೆ ಹಾಗೂ ಎಡರಂಗಕ್ಕೆ ಮತ ನೀಡಿದ್ದಾರೆ ಎಂದು ಸಿಪಿಐ[ಎಂ] ಪಾಲಿಟ್‌ಬ್ಯೂರೊ ಹೇಳಿಕೆ ತಿಳಿಸಿದೆ.

ಬಹಿರಂಗವಾಗಿ ಅಪ್ರಮಾಣಿಕ ದಾರಿಯನ್ನು ಕಾಂಗ್ರೈ ಹಿಡಿದಿದೆ ಎಂದು ತಿಳಿಸಿದ ಪಾಲಿಟ್‌ಬ್ಯೂರೊ, ಈ ರೀತಿಯ ಕೈವಾಡಗಳು, ಚುನಾವಣೆ ನಿಯಮಗಳ ಉಲ್ಲಂಘನೆಗಳು ನಡೆಯದಿದ್ದರೆ ಎಡರಂಗ ವಿಜಯವನ್ನು ಗಳಿಸುತ್ತಿತ್ತು. ಹಿಂದಿನದಕ್ಕಿಂತ ಬಹುಮತ ಸ್ವಲ್ಪ ಕಡಿಮೆಯಾಗಿದ್ದಿರಬಹುದಾದರೂ ವಿಜಯವನ್ನು ಗಳಿಸುತ್ತಿದ್ದುದರಲ್ಲಿ ಯಾವ ಅನುಮಾನವೂ ಇಲ್ಲ.

ಕಾಂಗ್ರೈ ಈ ಮೋಸದ ವಿಜಯದಿಂದ ಹೆಮ್ಮೆ ಪಡುವಂತಹದ್ದೇನೂ ಇಲ್ಲ. ಟಿ.ಎನ್.ವಿ. ಭಯೋತ್ಪಾದಕರೊಡನೆ ಜೊತೆಗೂಡಿ ಕೆಲಸ ಮಾಡುವ ರಾಜ್ಯದಿಂದ ಎಲ್ಲಾ ಗಿರಿಜನೇತರರನ್ನು ಹೊರದೂಡುವ ಯೋಚನೆಯೊಂದಿಗೆ ಸಹ ಸಮ್ಮತ ವ್ಯಕ್ತಪಡಿಸುವ ಟಿ.ಯು.ಜೆ.ಎಸ್.ನೊಂದಿಗೆ ಮೈತ್ರಿ ಬೆಳೆಸಿ ಪಡೆದ ವಿಜಯ ಇದು.

ಇನ್ನೇನು ಚುನಾವಣೆಗಳು ನಡೆಯುವುದಕ್ಕೆ ಎರಡು ದಿನಗಳಿವೆ ಎನ್ನುವಾಗ ಇಡೀ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶ ಎಂದು ಘೋಷಿಸಿ ಸೈನ್ಯವನ್ನು ಕಳಿಸಿದ್ದು ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಪರವಾಗಿ ತಮ್ಮ ಕೈವಾಡ ನಡೆಸುವುದಕ್ಕೆ ಎಂದು ಹಿಂದೆ ಸಿಪಿಐ(ಎಂ) ವ್ಯಕ್ತಪಡಿಸಿದ ಭಯ ಈ ಫಲಿತಾಂಶಗಳಿಂದ ನಿಜವಾಗಿದೆ.

ಮತ ಎಣಿಕೆಯ ಕೇಂದ್ರಗಳನ್ನು ಕಾಂಗ್ರೈ ಕಾರ್ಯಕರ್ತರು ಸುತ್ತುಗಟ್ಟಿ ಫಲಿತಾಂಶಗಳನ್ನು ತಿರುಚದಿದ್ದರೆ ಈ ವಿಜಯ ಅವರಿಗೆ ಸಾಧ್ಯವಾಗುತ್ತಿರಲಿಲ್ಲ ಎಂದು ಪಿ.ಬಿ.ತಿಳಿಸಿದೆ. ಕೇಂದ್ರ ಮಂತ್ರಿಗಳಿಂದ ಆಜ್ಞೆಗಳನ್ನು ಪಡೆಯುತ್ತಿದ್ದ ಕೇಂದ್ರ ಪಡೆಗಳು ನೀಡಿದ ರಕ್ಷಣೆಯಿಂದ ಕಾಂಗ್ರೈ ಗೂಂಡಾಗಳಿಗೆ ರೆಕ್ಕೆ ಪುಕ್ಕ ಬಂದತಾಯಿತು. ಅನೇಕ ಮತ ಎಣಿಕೆಯ ಕೇಂದ್ರದೊಳಕ್ಕೆ ಎಡರಂಗದ ಪ್ರತಿನಿಧಿಗಳಿರಲಿ ಚುನಾವಣೆಯ ಅಭ್ಯರ್ಥಿಗಳನ್ನೇ ಬಿಡಲಿಲ್ಲ.

ಅನೇಕ ಕೇಂದ್ರಗಳಲ್ಲಿ ಚುನಾವಣಾಧಿಕಾರಿಗಳು ಬಹಿರಂಗವಾಗಿ ಪಕ್ಷಪಾತ ಮಾಡಿದ್ದಾರೆ ಎಂದಿರುವ ಪಿ.ಬಿ. ಇದಕ್ಕೆ ಅನೇಕ ಉದಾಹಣೆಗಳನ್ನು ನೀಡಿವೆ. ಕಾಂಗ್ರೈ ಅಭ್ಯರ್ಥಿಗಳು 8-10 ಮತಗಳಿಂದ ಮಾತ್ರ ಗೆದ್ದಾಗ ಕೂಡ ಎಡರಂಗದ ಅಭ್ಯರ್ಥಿಗಳು ಮಾಡಿದ ಮರು ಎಣಿಕೆಯ ಮನವಿಯನ್ನು ತಳ್ಳಿಹಾಕಿದ ಚುನಾವಣಾಧಿಕಾರಿಗಳು ಎಡರಂಗದ ಅಭ್ಯರ್ಥಿಗಳು ಮಾನು, ಮಜ್ಲಿಸ್‌ಪುರ ಮೊದಲಾದ ಕೇಂದ್ರಗಳಲ್ಲಿ 200ಕ್ಕಿಂತ ಹೆಚ್ಚು ಮತಗಳನ್ನು ಪಡೆದರೂ ಕಾಂಗ್ರೈ ಒತ್ತಡಕ್ಕೆ ಬಲಿ ಬಿದ್ದು ಕಾಂಗ್ರೈ ಅಭ್ಯರ್ಥಿಯ ಮರು ಎಣಿಕೆ ಮನವಿಯನ್ನು ಒಪ್ಪಿಕೊಂಡಿದ್ದಾರೆ. (ಈಗ ಚುನಾವಣೆ ನಡೆದ 59 ಸ್ಥಾನಗಳಲ್ಲಿ ಇನ್ನೂ ಬಾರದಿರುವ ಒಂದು ಫಲಿತಾಂಶ ಇಂತಹ ಮರು ಎಣಿಕೆಯಲ್ಲಿ ತಡೆ ಹಿಡಿದಿರುವುದೇ ಆಗಿದೆ) ಆಗ ನಡೆದ ಗೊಂದಲದಲ್ಲಿ ಕಾಂಗ್ರೆಸ್

(8 ನೇ ಪುಟ ನೋಡಿ)

> "ಒಂದು ಸ್ಥಾನದಿಂದ ತ್ರಿಪುರಾದಲ್ಲಿ ಬಹುಮತ ಕಳೆದುಕೊಂಡಿರುವುದು ನಿರಾಶೆಗೆ ಕಾರಣವಾಗಬಾರದು ಕಾಂಗ್ರೆಸ್ ಪಡೆದಿರುವ ಈ ಒಂದು ಸ್ಥಾನ ಬಹುಮತ ಜನರ ಅಭಿಮತದ ಸರಿಯಾದ ಪ್ರತಿಬಿಂಬವೂ ಅಲ್ಲ. ಈ ಬಹುಮತ ನೇರ ಮಾರ್ಗದಿಂದ ಪಡೆದದ್ದೂ ಅಲ್ಲ"

ವಿಶೇಷ ಸೂಚನೆ

ಐಕ್ಯರಂಗ ತೀವ್ರ ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿದ್ದು ಈ ಗಂಭೀರತೆ ಮನಗಂಡು ಬಾಕಿ ಇರುವ ಎಲ್ಲಾ ಏಜೆನ್ಸಿದಾರರು ಈ ಕೂಡಲೇ ಹಣ ಪಾವತಿ ಮಾಡಬೇಕೆಂದು ವಿನಂತಿಸುತ್ತೇವೆ. ವ್ಯವಸ್ಥಾಪಕರು

ಫೆ. 22-"ಭಾರತ್ ಬಚಾವೋ" ದಿನಾಚರಣೆ
ಮಾರ್ಚ್ 15 ಭಾರತ್ ಬಂದ್

ಜನವರಿ 21 ರಂದು ನವದೆಹಲಿಯಲ್ಲಿ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಪಕ್ಷಗಳು ಪರಸ್ಪರ ಚರ್ಚಿಸಿ 'ಭಾರತ್ ಬಚಾವೋ ದಿನಾಚರಣೆ' ಹಾಗೂ 'ಭಾರತಬಂದ್'ನ ಕರೆ ನೀಡಿದ ಸುದ್ದಿಯನ್ನು "ಐಕ್ಯರಂಗ"ದ ಓದುಗರು ಈಗಾಗಲೇ ತಿಳಿದಿದ್ದಾರೆ. ಆ ಸಭೆ ಜನತೆಯಲ್ಲಿ ಮಾಡಿಕೊಂಡ ಮನವಿಯನ್ನು ಈ ಮುಂದೆ ಕೊಡಲಾಗಿದೆ.

ಆರ್ಥಿಕ ಸ್ಥಿತಿ ಹದಗೆಡುತ್ತಾ, ನಿರುದ್ಯೋಗ, ಬಡತನ ಮತ್ತು ಹಸಿವು ದಿನೇ ದಿನೇ ಹೆಚ್ಚುತ್ತಿರುವುದರ ಬಗ್ಗೆ ಈ ಸಭೆ ತೀವ್ರ ಆತಂಕ ವ್ಯಕ್ತ ಪಡಿಸುತ್ತದೆ. ಸಾವಿರಾರು ಕಾರ್ಖಾನೆಗಳು ಮುಚ್ಚಿರುವುದು, ಕೈಗಾರಿಕಾ ವರ್ಗಕ್ಕೆ ಲಾಭಕಾರೀ ಬೆಲೆ ನೀಡದಿರುವುದರಿಂದ ಜನತೆ ಬಳಲಿ ಬೆಂಡಾಗಿದ್ದಾರೆ. ಸತತವಾದ ಬೆಲೆ ಏರಿಕೆ ಅವರ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ. ದುರ್ಬಲ ವಿಭಾಗಗಳು ಹಾಗೂ ಮಹಿಳೆಯರ ಮೇಲೆ ಅತ್ಯಾಚಾರಗಳಿಗೆ ಕೊನೆಯೇ ಇಲ್ಲದಂತಾಗಿದೆ. ಪ್ರಜಾಪ್ರಭುತ್ವ ಹಕ್ಕುಗಳನ್ನು, ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ.

ಪ್ರಧಾನ ಮಂತ್ರಿಯವರು ಜನತೆ ಆರಿಸಿದ "ದೇಶ-ವಿರೋಧಿ" ರಾಜ್ಯ ಸರ್ಕಾರಗಳನ್ನು ತಾನು ವಜಾ ಮಾಡುತ್ತೇನೆ ಎಂದು ಭಂಡತನದಿಂದ ಹೇಳಿದ್ದಾರೆ. ತನ್ಮೂಲಕ ಸಂಸದೀಯ ಪ್ರಜಾಸತ್ತೆಗೇ ಅವರು ತೀವ್ರ ಬೆದರಿಕೆಯೊಡ್ಡಿದ್ದಾರೆ. ಉಚ್ಚ ಸ್ಥಾನಗಳಲ್ಲಿ ಭ್ರಷ್ಟಾಚಾರ, ಅದರ ಫಲವಾದ ಹಲವು ಹಗರಣಗಳು ಸಮಸ್ತ ದೇಶವನ್ನೇ ನಡುಗಿಸಿವೆ. ಇದರಿಂದಲೂ ತೃಪ್ತವಾಗದ ಕೇಂದ್ರ ಸರ್ಕಾರ ಬಜೆಟ್ ಮುನ್ನ ಆಡಳಿತಾತ್ಮಕ ಕ್ರಮಗಳಿಂದಲೇ ಬೆಲೆ ಹೆಚ್ಚಿಸುವ ಅಪಾಯಕಾರೀ ವಿಧಾನವನ್ನು ಬಳಸಿ ಬಿಕ್ಕಟ್ಟಿನ ಹೊರೆಯನ್ನು ಜನ ಸಾಮಾನ್ಯರ ಹೆಗಲಿಗೆ ವರ್ಗಾಯಿಸುತ್ತಿದೆ. ಕೋಮು ಸೌಹಾರ್ದ ಅಪಾಯಕ್ಕೀಡಾಗಿದೆ. ಆದರೆ ಸರಕಾರ ರಾಷ್ಟ್ರೀಯ ಐಕ್ಯತೆಗೆ ಸಂಬಂಧ ಪಟ್ಟ ಒಂದಾದರೂ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸೋತಿದೆ.

ಇವೆಲ್ಲಾ ಸಹಜವಾಗಿಯೇ

(8 ನೇ ಪುಟ ನೋಡಿ)

ಜನತಾ ಸರ್ಕಾರದ ಯೋಜನೆಯ ವೈಫಲ್ಯ

ಕಾವೇರಿಗೆ ನೂರು ಕೋಟಿ, ಕೃಷ್ಣ ಯೋಜನೆಗೆ 300 ಕೋಟಿ ರೂಪಾಯಿ ಈ ವರ್ಷ ಮಂಜೂರಿ ಮಾಡುವುದಾಗಿ ಆಶ್ವಾಸನೆ ನೀಡಿದ್ದರೂ ಕೂಡ ಅಷ್ಟು ಹಣ ಬಿಡುಗಡೆ ಮಾಡಲು ಸಾಧ್ಯವಾಗದ್ದರಿಂದ "ಸಚಿವರಾಗಿ ಇದ್ದೇನು ಪ್ರಯೋಜನ" ಎಂಬ ಸೊಲ್ಲು ಲೋಕೋಪಯೋಗಿ ಮಂತ್ರಿ ದೇವೇಗೌಡರಿಂದ ವಿಧಾನ ಸಭೆಯಲ್ಲಿ ಕೇಳಿ ಬಂತು. ರಾಜ್ಯದಲ್ಲಿ ಈಗಾಗಲೇ 33 ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಅಪೂರ್ಣವಾಗಿದ್ದು ಅವುಗಳನ್ನು ಮುಗಿಸಲು 3,200 ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದಾರೆ.

ರಾಜ್ಯದ ಆರ್ಥಿಕ ಪರಿಸ್ಥಿತಿ ಗಂಭೀರವಾಗಿರುವಾಗ ಯೋಜನೇತರ ವೆಚ್ಚದಲ್ಲಿ ಶೇ. 10 ರಷ್ಟು ಕಡಿತ ಮಾಡಲೂ ಸಾಧ್ಯವಿಲ್ಲೆಂಬ ಮಾತನ್ನು ಮುಖ್ಯ ಮಂತ್ರಿ ಹಾಗೂ ಆರ್ಥಿಕ ಶಾಖೆಯ ಹೊಣೆ ಹೊತ್ತಿರುವ ರಾಮಕೃಷ್ಣ ಹೆಗ್ಗಡೆಯವರು ಹೇಳಿದ್ದಾರೆ.

ದೇವೇಗೌಡ ಮತ್ತು ರಾಮಕೃಷ್ಣ ಹೆಗ್ಗಡೆಯವರ ಮಾತುಗಳಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೇನೆಂದರೆ ಕಾಂಗ್ರೆಸ್ಸಿನ ಹಾಗೆಯೇ ಜನತಾ ಸರಕಾರಕ್ಕೂ ರಾಜ್ಯದ ಯೋಜನೆ ಹಾಗೂ ಅವಶ್ಯಕತೆಗಳ ಕುರಿತಾಗಲೀ, ಯಾವುದಕ್ಕೆ ಪ್ರಾಧಾನ್ಯತೆ ನೀಡಬೇಕೆಂಬ ವಿಷಯದಲ್ಲಾಗಲೀ ಒಂದು ನಿರ್ದಿಷ್ಟ ನಿಲುವೆ ಇಲ್ಲ. ಸಮಗ್ರ ಅಭಿವೃದ್ಧಿಯ ದೃಷ್ಟಿ ಕೋನವಿಲ್ಲ. ಸ್ಥಳೀಯ ಒತ್ತಡಗಳಿಗೆ ಬಲಿ ಬೀಳುವ, ಮತಗಳಿಕೆಯ ದೃಷ್ಟಿಯಿಂದ ಚಿಲ್ಲರೆ ಯೋಜನೆಗಳಿಗೆ ಹಣ ವ್ಯಯ ಮಾಡುವುದರತ್ತ ಜನತಾ ಸರಕಾರದ ಗಮನ ಹೆಚ್ಚು ಹರಿಯುತ್ತಿರುವಂತೆ ಕಂಡು ಬರುತ್ತದೆ.

ರಾಜ್ಯಗಳ ಅಪಾರ ಸಂಪತ್ತನ್ನು ಕೇಂದ್ರ ಸರಕಾರ ನಾನಾ ವಿಧಗಳಿಂದ ದೋಚುತ್ತಿದೆ. ರಾಜ್ಯದ ಬೆಳವಣಿಗೆಗೆ ಸಂಪನ್ಮೂಲಗಳ ಕೊರತೆ ಉಂಟು ಮಾಡುತ್ತಿದೆ. ಕೇಂದ್ರ ಸರಕಾರದ ಈ ನೀತಿಯ ವಿರುದ್ಧ ಹೋರಾಡಲು ಸಿ. ಪಿ. ಐ. (ಎಂ) ನೇತೃತ್ವದ ಸರಕಾರಗಳ ಮುಖ್ಯ

(8 ನೇ ಪುಟ ನೋಡಿ)

'ತಮಸ್' ಪ್ರಕರಣ ಕೋಮುವಾದಿಗಳ ಬಣ್ಣ ಬಯಲು

ಜಿ. ಎನ್. ಮೋಹನ್

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೋಮುವಾದಿಗಳ ವಿರುದ್ಧ ಸ್ಪಷ್ಟ ನಿಲುವು ತಳೆದು ಅವರ ಬಣ್ಣವನ್ನು ಬಯಲು ಮಾಡು ತ್ತಿರುವಾಗಲೇ ಬಿ ಜೆ ಪಿ ಮತ್ತೊಮ್ಮೆ ಮುಂಬೈನಲ್ಲಿ ಮುಖಕ್ಕೆ ಮಸಿ ಬಳಿದುಕೊಂಡಿದೆ.

ಸೂರಜ್‌ಕುಂಡ್‌ನಲ್ಲಿ ನಡೆದ ವಿರೋಧ ಪಕ್ಷಗಳ ಸಮಾವೇಶದ ನಂತರ ಬಿ ಜೆ ಪಿ ಮತ್ತು ಅದರ ತವರು ಮನೆಯಾದ ಆರ್.ಎಸ್.ಎಸ್. ನವರಿಗೆ ದಿಕ್ಕು ತಪ್ಪಿದಂತಾಗಿದೆ. ಆ ಸಮಯದಲ್ಲಿಯೇ "ತಮಸ್" ವಿವಾದ ಕೂಡ ಕೋಮುವಾದಿಗಳು ಯಾರು ಎಂಬುದನ್ನು ಸ್ಪಷ್ಟವಾಗಿ ಬೊಟ್ಟು ಮಾಡಿ ತೋರಿಸಿದೆ.

ಪ್ರಾರಂಭದಲ್ಲಿಯೇ ಬಡ ಹಂದಿಯ ಮಾಲೀಕ ಹಂದಿಯನ್ನು ಕೊಲ್ಲಲು ತನ್ನ ಬೆವರು ಸುರಿಸುತ್ತಿದ್ದಾನೆ. ಹಂದಿ ಕೊನೆಯುಸಿರೆಳೆಯುತ್ತಿದ್ದಂತೆ ಅದನ್ನು ಕೆಲವರು ಕೊಳ್ಳುತ್ತಾರೆ. ಮೂರನೆಯ ದಿನ ಆ ಹಂದಿ ಮಸೀದಿಯಲ್ಲಿ ಬಿದ್ದಿರುತ್ತದೆ. ಮಾರಾಮಾರಿ ಪ್ರಾರಂಭ ಹಿಂದೂ ಮುಸ್ಲಿಂ ಗಲಾಟೆಗೆ ಇದು ಹಾದಿ ಮಾಡಿ ಕೊಡುತ್ತದೆ. ಕೊಲೆ-ಸಾವು-ಬೆಂಕಿಊರನ್ನು ತಲ್ಲಣಿಸುವಂತೆ ಮಾಡುತ್ತದೆ. ಗೊತ್ತಿಲ್ಲದೇ ಹಂದಿ ಮಾರಿದವನ ಕರುಳು ಕಿವುಚುತ್ತಾ ಹೋಗುತ್ತದೆ. ಘಟನೆಗೆ ಮೂಕಸಾಕ್ಷಿಯಾಗಿ ನಿಲ್ಲುತ್ತಾನೆ. ಕೋಮುದ್ವೇಷದ ಜ್ವಾಲೆಗಳು ಜೀವಗಳನ್ನು ಸುಡುತ್ತಾ ಹೋಗುತ್ತದೆ.

"ತಮಸ್", ಗೋವಿಂದ ನಿಹಲಾನಿ ನಿರ್ದೇಶಿಸಿದ ಬೀಷಮ್ ಸಹಾನಿಯವರ ಕೃತಿಯನ್ನಾಧರಿಸಿದ ದೂರದರ್ಶನ ಮಾಲಿಕೆ ಬಿ. ಜೆ. ಪಿ. ಯವರನ್ನೂ ತಲ್ಲಣಿಸುವಂತೆ ಮಾಡಿತ್ತು. ಕೋಮು ಗಲಭೆಗಳ ಅಧಿಕೃತ ವಕ್ತಾರರಾದ ಬಿ. ಜೆ.ಪಿ. ಹಾಗೆಯೇ ಮುಸ್ಲಿಂ ಕೋಮುವಾದಿಗಳು, ಶಿವಸೇನೆ ಈ ಚಿತ್ರದ ವಿರುದ್ಧ ತಿರುಗಿ ಬಿತ್ತು. ಆಸಮಯದಲ್ಲಿಯೇ "ತಮಸ್"ಚಿತ್ರದ ವಿರುದ್ಧ ಜಾವೇದ್‌ಸಿದ್ದಕಿ ಎಂಬಾತ್ 'ಈ ಧಾರಾವಾಹಿ ಇಂದಿನ ಯುವಕರನ್ನು ಹಿಂಸೆಗೆ ಪ್ರಚೋದಿಸುತ್ತದೆಂದು' ಮುಂಬೈನ ಹೈಕೋರ್ಟ್‌ನಲ್ಲಿ ದಾವೆ ಹೂಡಿದ.

ಮುಂಬೈ ಹೈಕೋರ್ಟ್‌ನ ನ್ಯಾಯಾಧೀಶರಾದ ಬಿ. ಲೆಂಟಿನ್ ಮತ್ತು ಸುಜಾತಾ ಮನೋಹರ್ ತುರ್ತಾಗಿ ಆ ಚಿತ್ರದ ಮುಂದಿನ ಭಾಗಗಳನ್ನು ವೀಕ್ಷಿಸಿ ಹೈಕೋರ್ಟ್‌ಗೆ ರಜೆ ಇದ್ದರೂ ತಮ್ಮ ವಾಸಸ್ಥಾನದಿಂದಲೇ "ತಮಸ್" ಅತ್ಯುತ್ತಮ ಧಾರಾವಾಹಿ" ಎಂದು ತೀರ್ಪು ನೀಡಿತಲ್ಲದೆ ಅಬ್ದುಲ್‌ಗಫಾರ್ ಖಾನ್‌ರವರು ನಿಧನ ಹೊಂದಿದ ಪ್ರಯುಕ್ತ ರಾಷ್ಟ್ರ ವ್ಯಾಪಿ ಶೋಕಾಚರಣೆ ನಡೆಯುತ್ತಿದ್ದರೂ ಈ ಧಾರಾವಾಹಿಯನ್ನು ಯಾವುದೇ ಎಗ್ಗಿಲ್ಲದೆ ಪ್ರದರ್ಶಿಸಬಹುದು ಇದು ರಾಷ್ಟ್ರವನ್ನು ಚಿಂತನೆಗೆ ಹಚ್ಚುವ ಚಿತ್ರ ಎಂದು ತೀರ್ಪಿತ್ತು, ಎಲ್ಲಾ ಕೋಮುವಾದಿಗಳಿಗೂ ಮಸಿ ಬಳಿದರು.

ಈ ಧಾರಾವಾಹಿಯ ಮೊದಲೆರಡು ಭಾಗದಲ್ಲಿ ಹಿಂಸೆ ಇರಬಹುದು. ಆದರೆ ಇದು ಸ್ವೀಕೃತವೇನಲ್ಲ. ಇದು ಚರಿತ್ರೆಯ ಚಿತ್ರಣ. ಚರಿತ್ರೆಯನ್ನು ಜಮಖಾನೆಯ ಕೆಳಗೆ ತೂರಿ ಬಿಡುವುದರಿಂದ ಅದನ್ನು ಅಲ್ಲಗಳೆಯುವುದು ಅಸಾಧ್ಯ. ಆದ್ದರಿಂದಲೇ 'ಚರಿತ್ರೆಯನ್ನು ಮರೆಯುವವರು ಪುನರಾವರ್ತನೆ ಮಾಡುತ್ತಾರೆ" ಎಂದು ಎಚ್ಚರಿಸಲಾಗಿದೆ ಎಂದು ತೀರ್ಪಿತ್ತರು.

ಹಿಂಸೆಯ ದೃಶ್ಯಗಳು ಈಗ ಪ್ರದರ್ಶಿತವಾದ ಎರಡು ಭಾಗಗಳಲ್ಲಿ ಬಂದಿವೆ ಎರಡೂ ಕೋಮುಗಳ ಕೋಮುವಾದಿಗಳು ಹಿಂಸೆಗೆ ಹೇಗೆಪ್ರಚೋದಿಸುತ್ತಾರೆ ಎಂಬುದನ್ನು ಇಡೀ ಚಿತ್ರ ತೋರಿಸುತ್ತದೆ. ಎರಡೂ ಕೋಮುಗಳಲ್ಲಿನ ಒಳ್ಳೆಯ ಜನರು ಪರಸ್ಪರರಿಗೆ ರಕ್ಷಣೆ ಮುಂದಿನ ಭಾಗಗಳಲ್ಲಿವೆ. ನೋಡಿದವರಿಗೆ ಉಳಿದ ಭಾಗಗಳನ್ನು ತೋರಿಸದಿದ್ದರೆ ಅಪಾರ್ಥವಾಗುತ್ತದೆ" ಎಂದು ದೃಢ ತೀರ್ಪಿತ್ತರು.

ಶಿವಸೇನೆಯ ಮುಖ್ಯಸ್ಥ ಬಾಳಾ ಸಾಹೇಬ್ ಥ್ಯಾಕರೆ, ಭಾರತೀಯ ಯುವ ಜನತಾ ಮೋರ್ಚಾಗಳೂಸಹ'ತಮಸ್' ಧಾರಾವಾಹಿಯನ್ನು ತೀವ್ರವಾಗಿ ಖಂಡಿಸಿತ್ತು. ಬಿ. ಜೆ. ಪಿ. ಯ ನೇತೃತ್ವದಲ್ಲಿ ಡಿಸಂಬರ್ 27 ರಂದು ದೆಹಲಿ ದೂರದರ್ಶನದ ಮುಂದೆ ತಮಸ್ ವಿರುದ್ಧ ಪ್ರತಿಭಟನೆ ಸಂಘಟಿಸಲಾಗಿತ್ತು. ಪ್ರದರ್ಶನಕಾರರು ಕಲ್ಲುಗಳನ್ನು ಪೋಲೀಸರ ಮೇಲೆ ತೂರಾಡಿಸುತ್ತಾ ದೂರದರ್ಶನ ಕೇಂದ್ರದ ಕಬ್ಬಿಣದ ಬಾಗಿಲುಗಳನ್ನು ಮುರಿದು ಕೈ ಕೈ ಮಿಲಾಯಿಸಿದ್ದನ್ನು ನೋಡಿದರೆ ತಮಸ್ ಚಿತ್ರದ ಪ್ರಾರಂಭದಲ್ಲಿಯೇ ಸಾರಿ ಹೇಳುವ 'ಚರಿತ್ರೆಯನ್ನು ಮರೆಯುವವರು ಅದರ ಪುನರಾವರ್ತನೆ ಮಾಡುತ್ತಾರೆ' ಎಂಬುದನ್ನು ನೆನಪಿಸುತ್ತಿತ್ತು.

ಹೈಕೋರ್ಟಿನ ದಿಟ್ಟ ತೀರ್ಪನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ, ಪಕ್ಷದ ಮುಂಬೈ ರಾಜ್ಯಘಟಕ ಇಂಡಿಯನ್ ಇನ್ಸ್ಟಿಟ್ಯೂಟ್‌ಆಫ್‌ಸೋಷಿಯಲ್‌ಸೈನ್ಸಸ್, ಲೋಕಮಂಚ್ ಸಾಂಸ್ಕೃತಿಕ ರಂಗ, ಸ್ಕ್ರೀನ್‌ಯುನಿಟ್(ಚಿತ್ರ ವಿಭಾಗ)ಗಳು ಸ್ವಾಗತಿಸಿವೆ. ಭಾರತೀಯಸಾಮಾಜಿಕ ವಿಜ್ಞಾನಿಗಳ ಸಂಸ್ಥೆ ಕೋಮುವಾದಿಗಳ ವಿರುದ್ಧ ಪ್ರತಿ ಚಳುವಳಿಯನ್ನು ರೂಪಿಸಲು ಕರೆ ಕೊಟ್ಟಿದೆ.

"ತಮಸ್" ಪ್ರಸಾರ ಎಂದಿನಂತೆ ಸಾಗಿದೆ ತಮಸ್ ಈ ರೀತಿ ನ್ಯಾಯಾಲಯದ ಕಟ್ಟೆ ಹತ್ತಿರುವ ಧಾರಾವಾಹಿಗಳಲ್ಲಿಎರಡನೆಯದು ಈಹಿಂದೆ'ಕಬೀರ್' ಧಾರಾವಾಹಿಯ ವಿರುದ್ಧವೂ ಇದೇ ರೀತಿ ಹುಯ್ಲೆದ್ದಿತ್ತು. ●

ಕೋಮುವಾದಿಗಳ ಪ್ರಯತ್ನಕ್ಕೆ ಪಿ.ಬಿ. ಖಂಡನೆ

ಟಿ.ವಿ. ಧಾರಾವಾಹಿ "ತಮಸ್" ನ ಪ್ರಸಾರವನ್ನು ಹಿಂತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ದೃಢವಾಗಿ ತಿರಸ್ಕರಿಸಿರುವ ಮುಂಬೈ ಹೈಕೋರ್ಟಿನ ಇಬ್ಬರು ನ್ಯಾಯಾಧೀಶರ ಪೀಠದ ತೀರ್ಪನ್ನು ಸಿ.ಪಿ.ಐ. (ಎಂ) ನ ಪಾಲಿಟ್‌ಬ್ಯೂರೋ ಸ್ವಾಗತಿಸುತ್ತದೆ. ಈ ಚಿತ್ರ "ಎರಡೂ ಕೋಮುಗಳ ಮೂಲಭೂತವಾದಿಗಳು ಹಾಗೂ ಉಗ್ರಗಾಮಿಗಳು ಹೇಗೆ ಕೋಮು ಹಿಂಸಾಚಾರ ಪ್ರಚೋದಿಸಿದರು" ಎಂಬುದನ್ನು ವ್ಯಕ್ತ ಪಡಿಸಿ ಕೋಮುವಾದ-ವಿರೋಧಿ ಪ್ರಜ್ಞೆಯನ್ನು ಎತ್ತರಿಸುತ್ತದೆ ಎಂದು ನ್ಯಾಯಾಧೀಶರು ಘೋಷಿಸಿದ್ದಾರೆ. ಈ ಸ್ಪಷ್ಟ ತೀರ್ಪು ಈ ಚಿತ್ರದ ಕುರಿತಾದ ವಿವಾದವನ್ನು ಅಂತ್ಯಗೊಳಿಸಬೇಕು.

ಆರ್.ಎಸ್.ಎಸ್. ಸೇರಿದಂತೆ ಕೆಲವು ಸಂಕುಚಿತ ದೃಷ್ಟಿಯ, ಕೋಮುವಾದೀ ಶಕ್ತಿಗಳು ಈ ಚಿತ್ರದ ಪ್ರಸಾರದ ವಿರುದ್ಧ ಚಳುವಳಿ ನಡೆಸುವ ಪ್ರಯತ್ನ ಮಾಡುತ್ತಿರುವುದನ್ನು ಪಾಲಿಟ್‌ಬ್ಯೂರೋ ಖಂಡಿಸುತ್ತದೆ. ಜಾತ್ಯಾತೀತ ಮೌಲ್ಯಗಳ ಮೇಲೆ ಹಲ್ಲೆ, ಜನರನ್ನು ಕೋಮು ಆಧಾರದ ಮೇಲೆ ವಿಭಜಿಸಲು ತೀವ್ರ ಪ್ರಯತ್ನಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ 'ತಮಸ್' ಚಿತ್ರಕ್ಕೆ ಈ ವಿರೋಧ ಕಂಡು ಬರುತ್ತಿದೆ. ಸೃಜನಾತ್ಮಕ ಕಲೆಗಳಲ್ಲಿ ಅಭಿ ವ್ಯಕ್ತಿಯ ಕಾನೂನು ಬದ್ಧ ಹಕ್ಕುಗಳನ್ನು ದಮನ ಮಾಡಲು ಬ್ಲ್ಯಾಕ್ ಮೇಲ್ ಅಥವಾ ಬೆದರಿಕೆಯೊಡ್ಡುವ ಹಕ್ಕು ಯಾರಿಗೂ ಇಲ್ಲ.

ಸಾಂಸ್ಕೃತಿಕ ರಂಗದಲ್ಲಿ ವಿಭಿನ್ನ ಅಭಿಪ್ರಾಯಗಳನ್ನು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ಹಾಗೂ ಸಂಕುಚಿತ ಪಂಥವಾದೀ ಅಸಹನೆಯನ್ನು ವಿರೋಧಿಸಲು ಸಿ.ಪಿ.ಐ. (ಎಂ) ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ವಿಭಾಗಗಳಿಗೆ ಕರೆ ನೀಡುತ್ತದೆ.

ಜನವರಿ 24, 1988.

ಭಾರತ್ ಬಂದ್ ಯಶಸ್ವಿಗೊಳಿಸಲು ದೇಶದ ಸಮಗ್ರತೆ ಕಾಪಾಡಲು

ಪ್ರತಿಜ್ಞಾ ಪ್ರಮಾಣವಚನ ಸ್ವೀಕಾರ

ರಾಜೀವ್‌ಗಾಂಧಿ ಸರ್ಕಾರದ ರಾಜೀನಾಮೆ, ದೇಶದ ಐಕ್ಯತೆ ಸಮಗ್ರತೆ ರಕ್ಷಣೆಗಾಗಿ ಹಾಗೂ 13 ಅಂಶ'ಗಳ ಬೇಡಿಕೆ ಮುಂದಿಟ್ಟು ಮಾರ್ಚ್ 15 ರಂದು ಭಾರತ್ ಬಂದ್ ಆಚರಿಸಲು ದೇಶದ ಪ್ರಮುಖ ವಿರೋಧ ಪಕ್ಷಗಳು ಜಂಟಿ ಕರೆ ನೀಡಿವೆ. ಡಿ.9ರಂದು ನಾಲ್ಕು ಎಡ ಪಕ್ಷಗಳ 24 ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಜರುಗಿದ ಚಾರಿತ್ರಿಕ ಮಜ್ದೂರ್-ಕಿಸಾನ್ ದೆಹಲಿ ರ್‍ಯಾಲಿ ಬಹಿರಂಗ ಸಭೆಯಲ್ಲಿ ಸ್ವೀಕರಿಸಿದ ನಿರ್ಣಯದಂತೆ ಜನವರಿ 30ರಂದು ದೇಶದಾದ್ಯಂತ ಸಾಮೂಹಿಕ ಪ್ರತಿಜ್ಞೆ ಸ್ವೀಕಾರ ಕೈಗೊಳ್ಳಲು ನೀಡಿದ ಕರೆಯಂತೆ ಕರ್ನಾಟಕದ ವಿವಿಧೆಡೆ ನಡೆದ ಈ ಕಾರ್ಯಕ್ರಮದ ವರದಿಗಳನ್ನು ಪ್ರಕಟಿಸುತ್ತಿದ್ದೇವೆ.

ಬೆಂಗಳೂರು

ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ. ಪಕ್ಷಗಳ ಕಾರ್ಯಕರ್ತರು ಮೆರವಣಿಗೆಯಲ್ಲಿ ಬಂದು ಸಿಲ್ವರ್ ಜ್ಯೂಬ್ಲಿ ಪಾರ್ಕ್‌ನಲ್ಲಿ ಸಂಜೆ 7 ಗಂಟೆಗೆ ನಡೆದ ಸಾಮೂಹಿಕ ಪ್ರತಿಜ್ಞಾ ಸ್ವೀಕಾರ ಸಭೆಯಲ್ಲಿ ಕೈಗಳಲ್ಲಿ ಜ್ಯೋತಿ ಹಿಡಿದು ಪ್ರಮಾಣ ವಚನ ಸ್ವೀಕರಿಸಿದರು. ಕಾ||ಪಿ. ಜಗನ್ನಾಥ್ ಪ್ರಮಾಣವಚನ ಓದಿದರು ಹಾಗೂ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾ. ಪಿ.ಕೆ. ಸುಬ್ರಮಣಿ, ಎಸ್.ಆರ್. ಆರಾಧ್ಯ, ಸಿ.ಪಿ.ಐ. ನ ಕಾಂ. ಬಾಲಕೃಷ್ಣನ್, ಹರಿಗೋವಿಂದ್‌ರವರುಗಳು ಮಾತನಾಡಿದರು.

ಶಿವಮೊಗ್ಗ

ಸಿ.ಪಿ.ಐ. (ಎಂ) ಹಾಗೂ ಸಿ..ಐ. ಟಿ.ಯು, ಡಿ.ವೈ.ಎಫ್.ಐ, ಎಸ್. ಎಫ್.ಐ. ಮತ್ತಿತರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಶಿವಮೊಗ್ಗ ನಗರದ ಪ್ರಮುಖ ಬೀದಿಗಳಲ್ಲಿ ದೇಶದ "ಐಕ್ಯತೆ-ಸಮಗ್ರತೆ, ಕೋಮು ಸಾಮರಸ್ಯ, ರಾಜೀವ್ ಗಾಂಧಿ ರಾಜೀನಾಮೆ ಒತ್ತಾಯಿಸುವ ಘೋಷಣೆ ಕೂಗುತ್ತಾ ಸುಮಾರು 500ಕ್ಕೂ ಹೆಚ್ಚು ಜನರು ಮೆರವಣಿಗೆ ನಡೆಸಿದರು. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ. ಎಸ್.ಬಿ. ಶಿವಶಂಕರ್, ಮಹ್ಮದ್ ಇಬ್ರಾಹಿಂ, ಮಹಮ್ಮದ್ ರಫೀಕ್‌ರವರುಗಳು ಮಾತನಾಡಿದರು.

ದ.ಕ. ಜಿಲ್ಲೆ

ಜಿಲ್ಲೆಯ ಮಂಗಳೂರು, ಉಡುಪಿ, ಮತ್ತು ಕುಂದಾಪುರದಲ್ಲಿ ಸೌತ್ ಕೆನರಾ ಟೈಲ್ ವರ್ಕರ್ಸ್ ಯುನಿಯನ್ ಸದಸ್ಯರು ತಮ್ಮ ಕೆಲಸ ಪ್ರಾರಂಭಿಸುವ ಮೊದಲು ಪ್ರತಿ ಕಾರ್ಖಾನೆಯ ಮುಂದೆ ಸಭೆ ನಡೆಸಿ ಪ್ರತಿಜ್ಞೆ ಸ್ವೀಕರಿಸಿದರು ಎಂದು ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ.ಕೆ. ಶಂಕರ್ ರವರು ತಿಳಿಸಿದ್ದಾರೆ.

ಬಾಗೇಪಲ್ಲಿ

ಜನವರಿ 31ರಂದು ಪಕ್ಷ ಮತ್ತು ರೈತ ಸಂಘ, ಡಿ.ವೈ.ಎಫ್.ಐ, ಎಸ್. ಎಫ್.ಐ.ನ ಕಾರ್ಯಕರ್ತರು ಪುರಸಭಾ ಸದಸ್ಯ ಅಬ್ದುಲ್ ಲತೀಫ್‌ರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪ್ರತಿಜ್ಞಾ ಪ್ರಮಾಣ ವಚನ ಸ್ವೀಕರಿಸಿದರು. ಕಾ. ಶ್ರೀರಾಮರೆಡ್ಡಿಯವರು ಪ್ರಮಾಣವಚನವನ್ನು ಓದಿ ಹೇಳಿದರು. ರೈತ ಸಂಘದ ಕಾಂ. ರಾಮಕೃಷ್ಣ, ಗಂಗುಲಪ್ಪ ಯುವ ಮುಖಂಡ ಕಾಂ. ಮಂಜೂರ್ ಅಹಮ್ಮದ್ ವಿದ್ಯಾರ್ಥಿ ನಾಯಕ ಕಾಂ. ಲಕ್ಷ್ಮೀನಾರಾಯಣರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸುಮಾರು 350 ಕ್ಕೂ ಹೆಚ್ಚು ಜನರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ●

ಕೇಳುವ ಸಮಯ ಬಂದಿದೆ.

ಗೆಳೆಯ,
ಕೇಳುವ ಸಮಯ ಬಂದಿದೆ
ಈಗ ಕೇಳು
ಕೈ ಕೆಸರಾದರೆ ಬಾಯಿ ಮೊಸರು
ಎಂದು ಕಲಿಸಿದರೇ ?
ಕೇಳು :
ಕೆಸರಾದದ್ದು ಯಾರ ಕೈ ?
ಮೊಸರಾದದ್ದು ಯಾರ ಬಾಯಿ ?
ಹಾಸಿಗೆ ಇದಷ್ಟು ಕಾಲು ಚಾಚು
ಎಂದು ಕಲಿಸಿದರೇ ?
ಕೇಳು :
ಹಾಸಿಗೆ ಯಾಕೆ ಇನ್ನೂ
ಕಾಲಿದ್ದಷ್ಟು ಉದ್ದ ಆಗುತ್ತಿಲ್ಲ ?
ಬಡವನ ಸಿಟ್ಟು ದವಡೆಗೆ ಮೂಲ
ಎಂದು ಕಲಿಸಿದರೇ ?
ಕೇಳು, ಸೆಟೆದು ನಿಂತು
ಸಿಟ್ಟಿನಿಂದಲೇ ಕೇಳು :
ಬಡವನ ಸಿಟ್ಟು
ಯಾರ ದವಡೆಗೆ ಮೂಲ ?

ಡಾ. ಸಂಜೀವ್ ಕುಲಕರ್ಣಿ
ಬೆಂಗಳೂರು

ಸಿ. ಐ. ಟಿ. ಯು. ರಾಜ್ಯ ಸಮಿತಿ ಕರೆಯಂತೆ ಜನವರಿ 21 ರಂದು

ರಾಜ್ಯದಾದ್ಯಂತ ಸೌಹಾರ್ದತಾ ಹಾಗೂ ಬೇಡಿಕೆ ದಿನಾಚರಣೆ

ರಾಜೀವ್‌ಗಾಂಧಿ ಸರ್ಕಾರದ ಆರ್ಥಿಕನೀತಿ, ಆಧುನೀಕರಣ, ಗಣಕೀಕರಣ ಕೈಗಾರಿಕಾ ನೀತಿ, ಕರ್ನಾಟಕ ರಾಜ್ಯದಾದ್ಯಂತ 6 ಸಾವಿರದಷ್ಟು ಸಣ್ಣ, ಮಧ್ಯಮ ಹಾಗೂ ದೊಡ್ಡ ಕೈಗಾರಿಕೆಗಳು ರೋಗಗ್ರಸ್ತವಾಗಿ ಮುಚ್ಚಲ್ಪಟ್ಟಿವೆ. ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಕೈಗಾರಿಕಾ ಮಾಲೀಕರ ಅಕ್ರಮ ಬೀಗಮುದ್ರೆ, ಕಾರ್ಮಿಕ ವಿರೋಧಿನೀತಿ, ಅಸಂಘಟಿತರಿಗೆ ಕನಿಷ್ಠ ಕೂಲಿ, ಕಾರ್ಮಿಕ ವಿವಾದದಲ್ಲಿ ಪೋಲೀಸ್ ಮಧ್ಯೆ ಪ್ರವೇಶದಿಂದ ರಾಜ್ಯದ ಕಾರ್ಮಿಕ ವರ್ಗ ಎದುರಿಸುತ್ತಿರುವ ಜ್ವಲಂತ ಸಮಸ್ಯೆ ಬಗೆಹರಿಸಲು ರಾಜ್ಯ ಸರ್ಕಾರ ಮಧ್ಯೆ ಪ್ರವೇಶಿಸಿ ಇತ್ಯಾರ್ಥಗೊಳಿಸಲು ಒತ್ತಾಯಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಜನವರಿ 21 ರಂದು ಸೌಹಾರ್ದತಾ ಮತ್ತು ಬೇಡಿಕೆಗಳ ದಿನಾಚರಣೆಗೆ ನೀಡಿದ ಕರೆಯಂತೆ ಅತ್ಯಂತ ಉತ್ಸಾಹದಾಯಕವಾಗಿ ರಾಜ್ಯದ ಬಹುತೇಕ ಕಡೆಗಳಲ್ಲಿ ಅಂದು ಭಾಗವಹಿಸಿ ಯಶಸ್ವಿಗೊಳಿಸಿದ ವರದಿಗಳನ್ನು ಪ್ರಕಟಿಸುತ್ತಿದ್ದೇವೆ.

ಬೆಂಗಳೂರು

ಮೈಸೂರು ಬ್ಯಾಂಕ್ ಚೌಕದಿಂದ ಹೊರಟ ಸಹಸ್ರ ಕಾರ್ಮಿಕರ ಮೆರವಣಿಗೆಯಲ್ಲಿ ಐ.ಟಿ ಸಿ, ಹರ್ಬರ್ಟ್ ಇಂಡಿಯಾ, ವಿ.ಎಸ್.ಟಿ, ಸೂರಿ ಅಂಡ್ ನಾಯರ್, ಐ.ಸಿ.ಬಿ. ಭಾರತಮಾತಾ, ಥರ್ಮ್ಸ್‌ಆಫ್, ಜಯರಾಂದಾಸ್ ಉದ್ಯೋಗ್, ಹೊಸಾಳಿಪ್ರೆಸ್, ಸೆಂಟ್ ಜೋಸೆಫ್ ಪ್ರೆಸ್, ನವಿಲಿನ್ ಪ್ರೆಸ್, ಕಾರ್ಮಿಕರು ಪಾಲ್ಗೊಂಡಿದ್ದರು. ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ನಡೆದ ಸಭೆಯನ್ನುದ್ದೇಶಿಸಿ ಕಾ.ಎಸ್. ಸೂರ್ಯನಾರಾಯಣರಾವ್, ಅನಂತರಾಂ ಆರ್.ಶ್ರೀನಿವಾಸ್, ಕೆ.ಎಸ್.ಸುಬ್ರಮಣ್ಯಂನಾರಾಯಣರಾವ್ ಬಾನು, ವೀರಸ್ವಾಮಿ, ಮುಂತಾದವರು ಮಾತನಾಡಿದರು.

ದ.ಕ.ಜಿಲ್ಲೆ

ಜಿಲ್ಲೆಯ ಮಂಗಳೂರು, ಉಡುಪಿ, ಕುಂದಾಪುರ, ಮತ್ತು ಬಂಟ್ವಾಳದಲ್ಲಿ ಕರಪತ್ರ ಹಂಚಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿ ಹಾಗೂ ತಾಲೋಕು ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಬಹಿರಂಗ ಸಭೆ ನಡೆಸಲಾಗಿದೆ. ಮಂಗಳೂರಿನಲ್ಲಿ ಸಂಜೆ 4 ಗಂಟೆಗೆ ಸುಮಾರು ಮೂರು ಸಾವಿರ ಕಾರ್ಮಿಕರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ನೆಹರೂ ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಪಿ.ಐ. [ಎಂ] ರಾಜ್ಯ ಕಾರ್ಯದರ್ಶಿ ಕಾ॥ಪಿ. ರಾಮಚಂದ್ರರಾವ್, ಸಿ.ಐ.ಟಿ.ಯು ಜಿಲ್ಲಾ ಅಧ್ಯಕ್ಷ ಕಾ ಕೆ.ಮೂಸಬ್ಬ, ಪ್ರ. ಕಾರ್ಯದರ್ಶಿ ಕಾ.ಬಿ.ಮಾಧವ, ಉಪಾಧ್ಯಕ್ಷ ಕಾ॥ಕೆ.ಶಂಕರ್, ಮಾತನಾಡಿದರು. ಕಾ॥ಪಿ.ಉಮೇಶ್ ವಂದನಾರ್ಪಣೆ ಮಾಡಿದರು.

ಚಿತ್ರದುರ್ಗ

ಹರಿಹರ : ಸಿ ಐ ಟಿ ಯು ನೇತೃತ್ವದಲ್ಲಿ ಮೈಸೂರು ಕಿರ್ಲೋಸ್ಕರ್, ಗ್ವಾಲಿಯರ್ ರೇಯಾನ್ಸ್, ಪಾಲಿಫೈಬರ್ಸ್, ಸಿಮೆಂಟ್ ಫ್ಯಾಕ್ಟರಿ, ತಾಲೋಕು ಬೀಡಿ ಕೆಲಸಗಾರರ ಸಂಘ ಮುಂತಾದ ಕಾರ್ಮಿಕ ಸಂಘಗಳ ಕಾರ್ಮಿಕರು ಮೆರವಣಿಗೆ ನಡೆಸಿ ತಾಹಸೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಕಾ॥ನಿತ್ಯಾನಂದಸ್ವಾಮಿ ಆರ್.ಬಿ.ಅಂಗಡಿ, ಎನ್.ಜಿ.ಪಠಾಣ ಮತ್ತು ಸಿ.ಎಂ.ಜಯಾನಂದ ಮಾತನಾಡಿದರು.

ರಾಣೆಬೆನ್ನೂರು

ಬೀಡಿ ಕಾರ್ಮಿಕರು, ನೇಕಾರ ಕಾರ್ಮಿಕರ ಬೃಹತ್ ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ತಾಲೋಕು ತಾಹಸೀಲ್ದಾರ್‌ರಿಗೆ ಮನವಿ ಅರ್ಪಿಸಿ ನಡೆದ ಸಭೆಯನ್ನುದ್ದೇಶಿಸಿ ತಾಲೋಕು ಬೀಡಿ ನೇಕಾರ ಸಂಘದ ಅಧ್ಯಕ್ಷ ನಿತ್ಯಾನಂದ ಸ್ವಾಮಿಯವರು ಮಾತನಾಡಿದರು.

ಕೊಡಗು

ಜನರಲ್ ವರ್ಕರ್ಸ್ ಯುನಿಯನ್ ನೇತೃತ್ವದಲ್ಲಿ ಕೊಡಗು ಕಾಫಿ ತೋಟಗಳ ಕಾರ್ಮಿಕರು ಒಂದು ದಿನದ ಮುಷ್ಕರ ನಡೆಸಿ ಮತ ಪ್ರದರ್ಶನ ನಡೆಸಿದರು. ಚೆಟ್ಟಳ್ಳಿ, ಸಿದ್ದಾಪುರ, ಪಾಲಿಬೆಟ್ಟಗಳಲ್ಲಿ ನಡೆದ ಬಹಿರಂಗ ಸಭೆಗಳಲ್ಲಿ ಯುನಿಯನ್ ಅಧ್ಯಕ್ಷ ಕಾ॥ ವೀರಸ್ವಾಮಿ, ಫರ್ನಾಂಡಿಸ್, ಅಬ್ದುಲ್ ರೆಜಾಕ್, ಡಾ॥ಎ.ಆರ್.ಅಸ್ರಣ್ಣ, ಎ. ಆರ್.ಕೃಷ್ಣಕುಮಾರ್, ಬಿ.ಸಿ ರಾಜು, ಎಸ್.ಡಿ ಕುಟ್ಟಪ್ಪ, ಅಂತೋನಿದಾಸ್ ಕೆ.ವಿ.ಕುಟ್ಟಪ್ಪನವರು ಮಾತನಾಡಿದರು.

ಗುಲ್ಬರ್ಗಾ

ಎಂ.ಎಸ್.ಕೆ. ಮಿಲ್ಸ್ ವರ್ಕರ್ಸ್ ಯೂನಿಯನ್ ಪದಾಧಿಕಾರಿಗಳಾದ ಅಬ್ದುಲ್ ಖಾದರ್ ಅನ್ನಬಾಯಿ, ಸಿ.ಎ. ಪಾಟೀಲ್, ತಿಮ್ಮಣ್ಣಾ ದೊಡ್ಡಮನಿ, ಮೈಹಿಮೂದ್ ಜಲಾಲರವರನ್ನೊಳಗೊಂಡ ನಿಯೋಗ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಮನವಿ ಸಲ್ಲಿಸಿತು.

ಧಾರವಾಡ

ಧಾರವಾಡ- ಹುಬ್ಬಳ್ಳಿಯ ಸಿ.ಐ ಟಿ ಯು. ಸಂಯೋಜಿತ ಕಾರ್ಮಿಕ ಸಂಘಗಳ ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಅರ್ಪಿಸಿದರು.

ಹಾಸನ

ಸಕಲೇಶಪುರ

ಸಿಐಟಿಯು ನೇತೃತ್ವದ ಕಾರ್ಮಿಕರ ಸಂಘದ ಕಾರ್ಮಿಕರು ಎಲ್ಲಾ ತೋಟಗಳಲ್ಲಿ ಯಶಸ್ವಿ ಮುಷ್ಕರ ನಡೆಸಿದರು. ಮೂರು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಸಕಲೇಶಪುರದಲ್ಲಿ ಮೆರವಣಿಗೆ ನಡೆಸಿ ಉಪವಿಭಾಗಧಿಕಾರಿ ಕಛೇರಿ ಮುಂದೆ ಮತ ಪ್ರದರ್ಶನ ನಡೆಸಿ ಅಧಿಕಾರಿಗಳ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ.ವಿ. ಸುಕುಮಾರ್, ಕೃಷ್ಣ, ದೂಜ, ಪಾಪುಲ್, ಟಬ್ಬಾರ್, ರವರುಗಳು ಮಾತನಾಡಿದರು.

ಹರಪ್ಪನಹಳ್ಳಿ

ಬೀಡಿ ಕಾರ್ಮಿಕರನ್ನೊಳಗೊಂಡ ಮೆರವಣಿಗೆ, ಲೇಬರ್ ಇನ್ಸ್‌ಪೆಕ್ಟರ್‌ರವರಿಗೆ ಮತ್ತು ತಹಸೀಲ್ದಾರ್‌ರವರಿಗೆ ಬೇಡಿಕೆಗಳ ಮನವಿ ಪತ್ರವನ್ನು ಅರ್ಪಿಸಿತು ನಂತರ ನಡೆದ ಸಭೆಯನ್ನುದ್ದೇಶಿಸಿ ಕಾ॥ಬಿ.ಪರಶುರಾಮ್, ಶಡಕಪ್ಪ, ಮಂಜಪ್ಪ, ನಿಶಾಬಿ, ರಹಿಮಾನ್, ಯೋಗಿತಾ, ಚಮನಬಿ, ತಾಯಾನಾಬಿ, ಕೃಷ್ಣಾಜಿ, ಮಾತನಾಡಿದರು.

ಚಿಕ್ಕಮಗಳೂರು

ಸಿ.ಐ.ಟಿ.ಯು. ನೇತೃತ್ವದ ಚಿಕ್ಕಮಗಳೂರು ಕಳಸದಲ್ಲಿ ತೋಟಕಾರ್ಮಿಕರು ಮುಷ್ಕರ ಹೂಡಿ ಮೆರವಣಿಗೆ, ಸಭೆ ನಡೆಸಿದರು. ●

ಲಿಪಿಕ ನೌಕರರ ದ.ಕ. ಜಿಲ್ಲಾ ಸಮ್ಮೇಳನ

ಜನವರಿ 24 ರಂದು ದ.ಕ ಜಿಲ್ಲಾ ಮಟ್ಟದ ಸರ್ಕಾರಿ ಲಿಪಿಕ ನೌಕರರ ಸಮ್ಮೇಳನ ಮಂಗಳೂರಿನ ಎನ್.ಜಿ.ಓ. ಭವನದಲ್ಲಿ ನೆರವೇರಿತು. ಕೇರಳ ಎನ್.ಜಿ.ಓ. ಪ್ರಧಾನ ಕಾರ್ಯದರ್ಶಿ ಕಾಂ.ಟಿ.ಕೆ. ಬಾಲನ್‌ರವರು ಸಮ್ಮೇಳನ ಉದ್ಘಾಟಿಸಿದರು.

ಸರ್ಕಾರಿ ನೌಕರರು ದುಡಿಯುವ ಸಮುದಾಯದ ಒಂದು ಅವಿಭಾಜ್ಯ ಅಂಗವಾಗಿದ್ದು ಇವರಲ್ಲಿ ಭಾಷೆ, ಪ್ರಾದೇಶಿಕತೆ, ಸಂಕುಚಿತ ಭಾವನೆಗಳು ನೌಕರರ ಮಧ್ಯೆ ಮೂಡದಂತೆ ಎಚ್ಚರವಹಿಸಬೇಕೆಂದು ಕರೆ ನೀಡಿದರು. 60 ಲಕ್ಷ ನೌಕರರನ್ನೊಳಗೊಂಡು ದೇಶದಲ್ಲಿಯೇ ಅತ್ಯಂತ ಬಲಿಷ್ಟ ಸಂಘಟನೆಯಾಗಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಬೇಡಿಕೆಗಳಾದ ಬೋನಸ್ಸು, ಬೆಲೆ ಏರಿಕೆ ವಿರುದ್ಧ ಕೇಂದ್ರದಿಂದ ರಾಜ್ಯಗಳಿಗೆ ಹೆಚ್ಚಿನಹಣಕಾಸಿನ ನೆರವು ತುಟ್ಟಿಭತ್ಯೆ, ಕರಾಳ ಶಾಸನ ದಮನಕಾರಿ ನೀತಿ ಉದ್ಯೋಗ ಭಕ್ಷಕ ಕಂಪ್ಯೂಟರ್ ವಿರುದ್ಧ ಫೆಬ್ರವರಿ 10 ರಂದು ನಡೆಸುವ ದೇಶವ್ಯಾಪಿ ಮುಷ್ಕರವನ್ನು ಯಶಸ್ವಿಗೊಳಿಸಲುಕರೆ ನೀಡಿದರು.

ಕೆ.ಇ.ಬಿ. ಸಂಘದ ವಾಸುದೇವ ಬೋಳೂರು ಜೀವವಿಮಾ ಸಂಘದ ಬಿ. ಮಾದವ, ಕಾಸರಗೋಡು ಎನ್.ಜಿ.ಓ.ನ ಎಂ.ಜಿ. ಭಟ್, ದಿನಗೂಲಿ ನೌಕರ ಸಂಘದ ಚಂದ್ರು, ಸ್ಟೈಫೆಂಡರಿ ಪದವೀಧರರ ಸಂಘದ ರಮೇಶ್ ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು. ರಾಜ್ಯ ಸಂಘದ ರಾಮಯ್ಯ ಹೆಗ್ಡೆ, ಎಂ.ಎಸ್. ಪಾರ್ಥಸಾರಥಿ, ಕುಂಬಯ್ಯ ಮುಖ್ಯ ಅತಿಥಿಗಳಾಗಿದ್ದರು. ಲಿಪಿಕ ಸಂಘದ ರಾಜ್ಯ ಅಧ್ಯಕ್ಷೆ ಕಾಂ. ಕೆ.ಎ. ಪಾರ್ವತಿ ಅಧ್ಯಕ್ಷತೆ ವಹಿಸಿದ್ದರು ಕಾರ್ಯದರ್ಶಿ ಆನಂದ ಗಟ್ಟಿ ಚಟುವಟಿಕೆ ವರದಿ ಮಂಡಿಸಿದರು. ಅಧ್ಯಕ್ಷರಾದ ಕೆ. ಪ್ರಭಾಕರ ಅಜಾರ್ ಸ್ವಾಗತಿಸಿ ಎಸ್. ರಾಮಚಂದ್ರ ವಂದನೆ ಸಲ್ಲಿಸಿದರು. ಲಿಪಿಕ ನೌಕರರ ಹಲವು ಸಮಸ್ಯೆಗಳ ಕುರಿತು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಜಿಲ್ಲಾ ಕಛೇರಿ ಎದುರು ರೈತರ ಪ್ರದರ್ಶನ

ಬೆಂಗಳೂರು ದ.ತಾಲೋಕು ರೈತ ಸಂಘ ಜನವರಿ11 ರಿಂದ ನಡೆಸುತ್ತಿದ್ದ ಅನಿರ್ದಿಷ್ಟ ಕಾಲದ ಧರಣಿ ಸತ್ಯಾಗ್ರಹ ಅಂತ್ಯಗೊಳಿಸಿ ಫೆ.3 ರಂದು ನೂರಾರು ರೈತ-ಕೃಷಿಕೂಲಿಗಾರರನ್ನೊಳಗೊಂಡು ಸಿಲ್ವರ್ ಜ್ಯೂಬ್ಲಿ ಪಾರ್ಕನಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿಎದುರುಮತಪ್ರದರ್ಶನ ನಡೆಸಲಾಯಿತು. ದ.ತಾಲೋಕು ರೈತರು, ಕೃಷಿ ಕೂಲಿಗಾರರು ತಾಲೋಕಿನಲ್ಲಿ ಸರ್ಕಾರಿ ಬಂಜರು ಭೂಮಿಯಲ್ಲಿಬೇಸಾಯ ಮಾಡುವವರಿಗೆ ಹಕ್ಕುಪತ್ರ ನೀಡಬೇಕು, ನಿವೇಶನ ರಹಿತರಿಗೆ ನಿವೇಶನ ನೀಡಬೇಕು,ಹಳ್ಳಿಯ ಎಲ್ಲಾ ಬಡವರಿಗೆ ಹಸಿರುಕಾರ್ಡು ಒದಗಿಸಬೇಕು ಮುಂತಾದ ಬೇಡಿಕೆಗಳ ಮನವಿಯನ್ನು ಜಿಲ್ಲಾಧಿಕಾರಿಯವರಿಗೆ ಅರ್ಪಿಸಲಾಯಿತು.ಅಲ್ಲಿಂದ ತಾಲೋಕು ಕಛೇರಿಗೆ ಬಂದಮೆರವಣಿಗೆ ತಹಸೀಲ್ದಾರ್‌ಗೆ ಮನವಿಅರ್ಪಿಸಿಬಹಿರಂಗಸಭೆನಡೆಸಲಾಯಿತು ಸಭೆಯನ್ನುದ್ದೇಶಿಸಿ ಕಾ॥ಪಿ.ಜಗನ್ನಾಥ್ ಲಕ್ಕಣ್ಣ ಕಾ॥ ಶ್ಯಾಮಣ್ಣರೆಡ್ಡಿ, ಮನೋಹರ, ಪಿ.ಕೆ. ಸುಬ್ರಮಣಿಯವರು ಮಾತನಾಡಿದರು. ಕಾ॥ವೆಂಕಟಾಚಲಯ್ಯ ಸ್ವಾಗತಿಸಿ ವೆಂಕಟೇಶಗೌಡ ವಂದನಾರ್ಪಣೆ ಮಾಡಿದರು.

ಮಂಡಲಿ ಪಂಚಾಯಿತಿ ನೌಕರರ ರಾಜ್ಯ ಸಮಾವೇಶ

ಕರ್ನಾಟಕ ರಾಜ್ಯ ಮಂಡಲ ಪಂಚಾಯತ್ ನೌಕರರ ರಾಜ್ಯ ಮಟ್ಟದ ಸಮಾವೇಶ ಜನವರಿ 28 ರಂದು ಗುಲ್ಬರ್ಗಾ ಟೌನ್ ಹಾಲ್‌ನಲ್ಲಿ ಜಿಲ್ಲಾ ಪರಿಷತ್ ಸದಸ್ಯ ಕಾಂ. ಮಾರುತಿ ಮಾನ್ಪಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾಂತ ರೈತ ಸಂಘದ ಕಾರ್ಯದರ್ಶಿಗಳಲ್ಲೊಬ್ಬರಾದ ಕಾಂ.ಕಲ್ಲಪ್ಪ ಕಿರಣಗಿಯವರು ಮುಖ್ಯ ಅತಿಥಿಗಳಾಗಿದ್ದರು. ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ಶುಭಕೋರಿ ಮಾತನಾಡಿದರು. ಕೇವಲ 50 ರೂ. ಸಂಬಳಕ್ಕೆ ದುಡಿಯುವ ನೌಕರರನ್ನು ಕೂಡಲೇ ಖಾಯಂ ಮಾಡುವುದು, ಜಿಲ್ಲಾ ಪರಿಷತ್ ನೌಕರರೆಂದು ಪರಿಗಣಿಸುವುದು, ಹಕ್ಕಿನ ರಜಾ, ಕನಿಷ್ಠ ಕೂಲಿಯ ನಿಗದಿ ಸಮವಸ್ತ್ರ ಮುಂತಾದ ಸೌಕರ್ಯಗಳನ್ನು ಒದಗಿಸಬೇಕೆಂದು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು. ಕಾ.ಎನ್.ಕೆ. ಉಪಾಧ್ಯಾಯರನ್ನೊಳಗೊಂಡು ರಾಜ್ಯ ಮಟ್ಟದ ಸಂಘವನ್ನು ರಚಿಸಲು ತೀರ್ಮಾನಿಸಲಾಯಿತು.

ಸಮಾವೇಶದ ನಂತರ ಸಾವಿರಾರು ನೌಕರದಾರರು ಮಹಿಳೆಯರನ್ನು ಒಳಗೊಂಡ ಮೆರವಣಿಗೆ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರಿಗೆ ಬೇಡಿಕೆಗಳ ಮನವಿ ಅರ್ಪಿಸಲಾಯಿತು. ಮಾರ್ಚ್ ಕೊನೆಯ ವಾರದಲ್ಲಿ ಬೇಡಿಕೆಗಳನ್ನು ಒತ್ತಾಯಿಸಿ ವಿಧಾನ ಸೌಧ ಚಲೋ ಕಾರ್ಯಕ್ರಮ ರೂಪಿಸಲು ಸಮ್ಮೇಳನ ಕರೆ ನೀಡಿದೆ ಎಂದು ಮಂಡಲ ಪಂಚಾಯತ್ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಕಾಂ. ಮಾರುತಿ ಮಾನ್ಪಡೆ ಪ್ರ ಕಾರ್ಯದರ್ಶಿ ಮಲ್ಲಪ್ಪಾ ಉಪ್ಪಾರರವರು ತಿಳಿಸಿದ್ದಾರೆ. ●

ಕಾ॥ ಶಾಂತಕುಮಾರಿ ಸರಳ ವಿವಾಹ

ಐಕ್ಯರಂಗ ಪತ್ರಿಕೆಯಲ್ಲಿ ದುಡಿಯುತ್ತಿರುವ ಕಾ॥ಶಾಂತಕುಮಾರಿಯವರ ಸರಳ ವಿವಾಹ ವಿ.ಮುರಳಿಯವರೊಡನೆ ಜನವರಿ 10 ರಂದು ಬೆಂಗಳೂರಿನಲ್ಲಿ ಜರುಗಿತು. ವಿವಾಹ ಸಮಾರಂಭದಲ್ಲಿ ಪಕ್ಷದ ಗಣ್ಯರಾದ ಕಾ॥ಎಸ್.ಸೂರ್ಯನಾರಾಯಣರಾವ್, ಎನ್.ಕೆ.ಉಪಾಧ್ಯಯ, ಎಂ ಎನ್ ಉಗ್ರಪ್ಪ, ಬಂಡಾಯ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಡಿ ವೈ ಎಫ್ ಐ ಅಧ್ಯಕ್ಷ ಎಚ್. ಎನ್ ನಾಗಮೋಹನ್‌ದಾಸ್‌ರವರು ಸಮಾರಂಭದಲ್ಲಿ ಮಾತನಾಡಿ ಸಂಪ್ರದಾಯ ಆಡಂಬರವಿಲ್ಲದೆ ಸರಳ ವಿವಾಹ ಮೂಲಕ ಹೊಸ ಬಾಳನ್ನು ಆರಂಭಿಸುತ್ತಿರುವ ನೀವು ದುಡಿಯುವ ಜನರ ಜೊತೆಗೆ ಜನಪರ ಹೋರಾಟಗಳಲ್ಲಿ ಭಾಗವಹಿಸುತ್ತಾ ಮಾದರಿಯಾದ ಜೀವನ ನಡೆಸಲು ಕರೆ ನೀಡಿದರು. ವಿವಿಧ ಸಾಮೂಹಿಕ ಸಂಘಟನೆಗಳಿಂದ ಅನೇಕ ಮುಖಂಡರು ಶುಭಕೋರಿ ಮಾತನಾಡಿದರು.

ಮದುವೆ ಸಮಾರಂಭದ ವ್ಯವಸ್ಥೆಯನ್ನು ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಏರ್ಪಾಟು ಮಾಡಿತು.

ಕಾಂಗ್ರೆಸ್-ಛಿದ್ರಕಾರಿಗಳ ಜಂಟಿ ಧಾಳಿಯ ವಿರುದ್ಧ

ತ್ರಿಪುರಾದಲ್ಲಿ ಚುನಾವಣಾ ಹೋರಾಟ

ಫೆಬ್ರವರಿ 2, 1988. ಈ ವರದಿ ಬರೆಯುವ ಹೊತ್ತಿಗೆ ತ್ರಿಪುರಾದಲ್ಲಿ ಜನತೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸುತ್ತಿದ್ದಾರೆ. ಒಂದು ದಶಕದ ಜನಪರವಾದ ಹಲವಾರು ಶ್ರಮಗಳಿಂದಕೂಡಿದ ಯಶಸ್ವೀ ಆಳ್ವಿಕೆ ಹಾಗೂ ದೇಶದ ಇತರೆಡೆಗಳಲ್ಲೆಲ್ಲಾ ವಿಚ್ಛಿದ್ರಕಾರೀ ಶಕ್ತಿಗಳು ತಾಂಡವವಾಡುತ್ತಿರುವಾಗ ತ್ರಿಪುರಾದಲ್ಲಿ ಬುಡಕಟ್ಟು ಜನರು ಮತ್ತು ಇತರರ ನಡುವಿನ ಐಕ್ಯತೆಯನ್ನು ರಕ್ಷಿಸಿದ ಉಜ್ವಲ ದಾಖಲೆಗಳೊಂದಿಗೆ ಸಿ.ಪಿ.ಐ. (ಎಂ) ನೇತೃತ್ವದ ಎಡರಂಗ ಚುನಾವಣಾ ಕಣಕ್ಕಿಳಿದಿದ್ದರೆ ತೀವ್ರ ಗುಂಪುಗಾರಿಕೆಯಿಂದ, ಸಮಾಜ ವಿರೋಧೀ ವ್ಯಕ್ತಿಗಳಿಂದ ಕಳೆದ ಹತ್ತು ವರ್ಷಗಳಿಂದ ಜನತೆಯ ನೆಮ್ಮದಿ ಕೆಡಿಸಲು ಪ್ರಯತ್ನಿಸುತ್ತಿರುವ ಕಾಂಗ್ರೆಸ್ (ಐ) ಕಾನೂನು ಬಾಹಿರ ಟಿ.ಎನ್.ವಿ. ಭಯೋತ್ಪಾದಕರೊಂದಿಗೆ ಸಂಬಂಧ ಹೊಂದಿರುವ ಟಿ.ಯು.ಜೆ.ಎಸ್.ನೊಂದಿಗೆ ಮೈತ್ರಿ ಮಾಡಿಕೊಂಡು ಚುನಾವಣೆ ಗೆಲ್ಲಲು ಸರ್ವ ಪ್ರಯತ್ನ ನಡೆಸಿದೆ. ಪ್ರಚಾರದ ಅಂತ್ಯದ ಹೊತ್ತಿಗೆ ಇಡೀ ತ್ರಿಪುರಾವನ್ನು ಪ್ರಕ್ಷುಬ್ಧ ಪ್ರದೇಶವೆಂದು ಘೋಷಿಸಿ ಸೇನಾ ತುಕಡಿಗಳನ್ನು ಕಳಿಸಿದ್ದು ಇದೇ ಪ್ರಯತ್ನದ ಒಂದು ಅಂಗ.

ಕಾಂಗ್ರೆಸ್ (ಐ) ಹಣದ ಹೊಳೆ ಮತ್ತು ರಾಜೀವ್ ಗಾಂಧಿ ಅಧಿಕಾರ ಬಳಸಿ ಗೆಲ್ಲುವ ತಂತ್ರ ಹೂಡಿದೆ ಎಂದು ದೆಹಲಿಯ ಪತ್ರಿಕೆ "ಇಂಡಿಯಾ ಟುಡೇ" ಕೂಡಾ ಗಮನಿಸಿದೆ. ಒಟ್ಟು 60 ಸ್ಥಾನಗಳಲ್ಲಿ 46 ರಲ್ಲಿ ಸ್ಪರ್ಧಿಸಿ, ಉಳಿದ 14ನ್ನು ಟಿ ಯು ಜೆ.ಎಸ್.ಗೆ ಬಿಟ್ಟುಕೊಟ್ಟಿರುವ ಕಾಂಗ್ರೆಸ್ (ಐ) ಕನಿಷ್ಟ 15ಕೋಟಿ ರೂ ಗಳನ್ನಾದರೂ ಈ ಚುನಾವಣೆಗೆ ಸುರಿದಿದೆ ಟಿ.ಯು.ಜೆ.ಎಸ್. ಸ್ಪರ್ಧಿಸುತ್ತಿರುವ ಎಲ್ಲಾ 14 ಕ್ಷೇತ್ರಗಳು ಮೀಸಲು ಕ್ಷೇತ್ರಗಳು. ಉಳಿದ ಮೂರು ಮೀಸಲು ಕ್ಷೇತ್ರಗಳಲ್ಲಿ ಅದು ಕಾಂಗ್ರೆಸ್ (ಐ)ಗೆ ಬೆಂಬಲ ನೀಡಿದೆ. ಗಮನಾರ್ಹ ಸಂಗತಿಯೆಂದರೆ ಬಾಂಗ್ಲಾ ದೇಶದೊಂದಿಗೆ ಗಡಿ ಹೊಂದಿದ್ದು ಟಿ.ಎನ್.ವಿ. ಭಯೋತ್ಪಾದಕರು ನುಸುಳಿ ಬರುವ ಯಾವ ಕ್ಷೇತ್ರದಲ್ಲೂ ಕಾಂಗ್ರೆಸ್ (ಐ) ಸ್ವತಃ ಚುನಾವಣೆಗೆ ನಿಂತಿಲ್ಲ, ಬದಲಾಗಿ ಟಿ.ಎನ್.ವಿ. ಯೊಂದಿಗೆ ಸಂಬಂಧ ಹೊಂದಿರುವ ಟಿ.ಯು.ಜೆ ಎಸ್.ನ್ನು ಬೆಂಬಲಿಸುತ್ತಿದೆ. ಚುನಾವಣೆಯ ಘೋಷಣೆಯ ನಂತರ ಒಮ್ಮಿಂದೊಮ್ಮೆಗೆ ಟಿ.ಎನ್.ವಿ. ಹಲ್ಲೆಗಳು ಹೆಚ್ಚಿದ್ದು, ಮತ್ತು ಅದೇ ನೆವ ಹೂಡಿ ಇಡೀ ತ್ರಿಪುರಾವನ್ನು ಪ್ರಕ್ಷುಬ್ಧ ಪ್ರದೇಶವೆಂದು ರಾಜ್ಯ ಸರ್ಕಾರದೊಡನೆ ಪರಾಮರ್ಶೆಯನ್ನು ನಡೆಸದೆ ಘೋಷಿಸಿರುವುದನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು.

ಕಾಂಗ್ರೆಸ್‌ನ (ಐ) ಹಿಂಸಾಚಾರ

ಕಳೆದ ವರ್ಷ ಪಶ್ಚಿಮ ಬಂಗಾಳ, ಕೇರಳದಂತೆ ತ್ರಿಪುರಾದಲ್ಲೂ ಚುನಾವಣೆ ಗೆಲ್ಲಲು ಯಾವ ಕೀಳು ಮಟ್ಟಕ್ಕೂ ಇಳಿಯಲೂ ಕಾಂಗ್ರೆಸ್ (ಐ) ಹೇಸುತ್ತಿಲ್ಲ ಎಂಬುದಕ್ಕೆ ಇದು ಇತ್ತೀಚಿನ ಉದಾಹರಣೆ. ಚುನಾವಣಾ ದಿನಾಂಕ ಗೊತ್ತುಪಡಿಸುವಲ್ಲಿನ ವಿಳಂಬದಿಂದಲೇ ಇದು ಆರಂಭವಾಗಿತ್ತು. ನೇರವಾಗಿ ಚುನಾವಣೆ ಎದುರಿಸುವ ಎದೆಗಾರಿಕೆಯಿಲ್ಲದ ಕಾಂಗ್ರೆಸ್(ಐ) ಸಾಲಮೇಳದ ಆಮಿಷ ತೋರಿಸಿ ಪ್ರಭಾವ ಬೀರುವಲ್ಲಿಯೂ ವಿಫಲವಾದ ಮೇಲೆ ಚುನಾವಣಾ ಆಯೋಗದ ಮೇಲೆ ಸತತಒತ್ತಡ ಹೇರುತ್ತಾ ಬಂತು. ಚುನಾವಣಾ ಆಯೋಗ ಕೂಡಾ ನಾಚಿಕೆಯಿಲ್ಲದೆ ಅದಕ್ಕೆ ತಲೆ ಬಾಗಿದರೂ ಕೊನೆಗೂ ದಿನಾಂಕ ಗೊತ್ತು ಪಡಿಸಲೇಬೇಕಾಗಿ ಬಂತು. ಇದು ತ್ರಿಪುರಾದ ಪ್ರಜಾಪ್ರಭುತ್ವವಾದೀ ಶಕ್ತಿಗಳ ವಿಜಯ. ಇದರಿಂದ ತೀವ್ರ ಖಿನ್ನರಾದ ಕಾಂಗ್ರೆಸ್ ಹಾಗೂ ಟಿ.ಯು.ಜೆ.ಎಸ್.ಗಳು ಈಗ ಕೇಂದ್ರ ಸರ್ಕಾರದ ಸೇನಾ ದಂಡದ ಬಲದಿಂದ ತಮ್ಮ ಆಸೆ ಈಡೇರಿಸಿಕೊಳ್ಳುವ ನಿರೀಕ್ಷೆ ಇಟ್ಟುಕೊಂಡಂತೆ ಕಾಣುತ್ತಿದೆ.

ಚುನಾವಣಾ ದಿನಾಂಕ ಗೊತ್ತುಪಡಿಸಿದ ದಿನದಿಂದಲೇ ಕಾಂಗ್ರೆಸ್(ಐ) ಹಿಂಸಾಚಾರ ವಿಪರೀತ ಹೆಚ್ಚಿದೆ. ಹೇಗಾದರೂ ಮಾಡಿ ಚುನಾವಣೆಯನ್ನು ಅಸ್ತವ್ಯಸ್ತ ಗೊಳಿಸುವುದೇ ಅದರ ಉದ್ದೇಶವಾಗಿತ್ತೆಂಬುದು ಈಗ ಸ್ಪಷ್ಟವಾಗಿದೆ. ಟಿ ಎನ್ ವಿ. ಛಿದ್ರಕಾರಿಗಳ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿರಬೇಕಾದ ಬಿ.ಎಸ್.ಎಫ್. ಮುಂತಾದ ಕೇಂದ್ರೀಯ ಪಡೆಗಳನ್ನು ಕೂಡಾ ತನ್ನ ಹಿಂಸಾಚಾರದಲ್ಲಿ ಬಳಸಲು ಕಾಂಗ್ರೆಸ್ (ಐ) ಹಿಂಜರಿದಿಲ್ಲ. ಕಳೆದ ಜನವರಿ 2ರಂದು ಕಾಂಗ್ರೆಸ್ (ಐ) ಮೆರವಣಿಗೆಯೊಂದು ಸಿ.ಪಿ.ಐ.(ಎಂ)ಕಚೇರಿಯ ಮೇಲೆ ಹಲ್ಲೆ

(5ನೇ ಪುಟನೋಡಿ)

ಕಾಂಗ್ರೆಸ್‌ನ ಶೋಚನೀಯ ಚಿತ್ರ

ಕಾಂಗ್ರೆಸ್(ಐ) ಅಭ್ಯರ್ಥಿಗಳ ಪಟ್ಟಿ ಹಾಗೂ ಅದರ ಪ್ರಕಟಣೆಯೇ ರಾಜ್ಯದಲ್ಲಿ ಪಕ್ಷ ಹೇಗೆ ವಿಕೃತಗೊಂಡಿದೆಯೆಂಬುದನ್ನು ತೋರಿಸುತ್ತದೆ ಈ ಪಟ್ಟಿ ತಯಾರಿಕೆಯ ಮೊದಲು ತಿಂಗಳಾನುಗಟ್ಟಲೆ ದೊಡ್ಡ ಕಿತ್ತಾಟವೇ ನಡೆಯಿತು. ಚುನಾವಣಾ ದಿನಾಂಕ ವಿಳಂಬಗೊಳಿಸುವಲ್ಲಿ ಇದೂ ಒಂದು ಕಾರಣ, ನಂತರ ದೆಹಲಿಯಿಂದ ಪಟ್ಟಿಯ ಏಕಪಕ್ಷೀಯ ಘೋಷಣೆಯಾಯಿತು. ಇದರಲ್ಲಿ 80% ಮಂದಿ ಯಾವುದೇ ರಾಜಕೀಯ ಹಿನ್ನೆಲೆಯಿಲ್ಲದವರು ಬಹಳ ಮಂದಿ ಕುಪ್ರಸಿದ್ಧ ಸಮಾಜ ಘಾತುಕ ವ್ಯಕ್ತಿಗಳು.

ಪಟ್ಟಿ ಪ್ರಕಟವಾದ ಮೇಲೆ ಹಲವಾರು ಕಡೆ ತಮ್ಮ ಅಭ್ಯರ್ಥಿಗಳ ಹೆಸರು ಪಟ್ಟಿಯಲ್ಲಿ ಕಾಣದ ಕಾಂಗ್ರೆಸಿಗಳು ತಮ್ಮದೇ ಬಾವುಟ ಹಾಗೂ ಬ್ಯಾನರುಗಳನ್ನು ಕಿತ್ತು ತುಳಿದು ಹಾಕಿದರು. ಮಾತಾಬಾರಿ ಮತ ಕ್ಷೇತ್ರದಿಂದ ಬಂದ ಕಾಂಗ್ರೆಸ್ ಬೆಂಬಲಿಗರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಮೇಲೆ ಹಲ್ಲೆ ಮಾಡಿದರು. ಮಾಜೀ ಕಾಂಗ್ರೆಸ್ ಮುಖ್ಯಮಂತ್ರಿ ಸುಖಮಯ್‌ಸೇನ್ ಕೂಡಾ ಪಟ್ಟಿಯನ್ನು ವಿರೋಧಿಸಿ ಹೇಳಿಕೆ ನೀಡಿದರು. ಆಮೇಲೆ "ತೃಪ್ತ"ರಾಗಿ ಮತ್ತೊಂದು ಹೇಳಿಕೆ ನೀಡಿದರು !

ಡಿಸೆಂಬರ್ 12 ರಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೇಂದ್ರಮಂತ್ರಿ ದೇಬ್‌ರೊಡನೆ ದೆಹಲಿಯಿಂದ ಹಿಂದಿರುಗಿದಾಗ ವಿಮಾನ ನಿಲ್ದಾಣದಲ್ಲೇ ಮಾಜೀಮಂತ್ರಿ ಲಕ್ಷ್ಮಿನಾಗ್ ನೇತೃತ್ವದಲ್ಲಿ ಮಹಿಳಾ ಕಾಂಗ್ರೆಸ್(ಐ) ಕಾರ್ಯಕರ್ತೆಯರ ಗುಂಪೊಂದು ಅವರಿಬ್ಬರನ್ನು ಅಟ್ಟಿಸಿಕೊಂಡು ಹೋಯಿತು. ನಂತರ ನಡೆದ ಒಂದು ಸಭೆಯಲ್ಲಿ ಕೇಂದ್ರಮಂತ್ರಿಗಳು ಭಿನ್ನಮತೀಯರಿಗೆ ತಕ್ಕ ಶಾಸ್ತಿ ಮಾಡಲಾಗುವುದೆಂದು ಬೆದರಿಸಿದರು. ಅಭ್ಯರ್ಥಿಗಳು ಎಂತಹವರೆಂಬುದು ಮುಖ್ಯವಲ್ಲ,ಎಡರಂಗವನ್ನು ಸೋಲಿಸುವುದು ಮುಖ್ಯ ಎಂದು ಸಮಜಾಯಿಸೀ ನೀಡಿದರು ತಮ್ಮ ಅತೃಪ್ತ ಸದಸ್ಯರಿಗೆ.

ಎಡರಂಗ : ಉಜ್ವಲ ಸಾಧನೆಗಳೊಂದಿಗೆ ಮತ್ತೆ ಜನತೆಯ ಆದೇಶಕ್ಕಾಗಿ

ತ್ರಿಪುರಾದಲ್ಲಿ ಎಡರಂಗ ಆಡಳಿತ ವಹಿಸಿ ಇದೇ ಜನವರಿ 5 ಕ್ಕೆ ಸರಿಯಾಗಿ ಹತ್ತು ವರ್ಷಗಳುಪೂರ್ಣಗೊಂಡವು. ಮೊದಲದಿನದಿಂದಲೇ ಕಾಂಗ್ರೆಸ್ (ಐ) ಟಿ.ಎನ್.ವಿ, ಟಿ.ಯು.ಜೆ.ಎಸ್. ಹಾಗೂ ಆಮ್ರ ಬಂಗಾಲೀ ಛಿದ್ರಕಾರಿಗಳೊಂದಿಗೆ ಕೈಮಿಲಾಯಿಸಿ ಸತತವಾಗಿ ಹಲ್ಲೆ ಮಾಡುತ್ತಿದ್ದರೂ ಜನತೆಯ ಪೂರ್ಣ ಬೆಂಬಲದಿಂದಾಗಿ ಅಧಿಕಾರದ ಒಂದು ದಶಕವನ್ನು ಪೂರ್ಣಗೊಳಿಸಿದ ಮಹತ್ಸಾಧನೆ ತ್ರಿಪುರಾದ ಎಡರಂಗದ್ದು.

ಬೂಟಾಸಿಂಗರ ಬೂಟಾಟಿಕೆ

ತ್ರಿಪುರಾದಲ್ಲಿ ಕಾನೂನು ವ್ಯವಸ್ಥೆ ನಿರಂತರವಾಗಿ ಹದಗೆಡುತ್ತಿದೆ ಎಂದು ಕೇಂದ್ರ ಗೃಹಮಂತ್ರಿ ಬೂಟಾಸಿಂಗ್ ಆಪಾದಿಸಿ ಡಿಸೆಂಬರ್ 9 ರಂದು ಪತ್ರ ಬರೆದಿದ್ದರು. ಆದರೆ ಕಳೆದ ಮೂರು ವರ್ಷಗಳ ಅಂಕೆ-ಸಂಖ್ಯೆಗಳು ಹೇಳುವ ಕಥೆಯೇ ಬೇರೆ ಇಲ್ಲಿ ನೋಡಿ.

ವರ್ಷ	ಕೊಲೆ	ಡಕಾಯಿತಿ	ಕಳವು	ಘರ್ಷಣೆ	ಒಟ್ಟು ಅಪರಾಧ
1985	150	212	21	433	5871
1986	127	1[illegible]0	13	370	4613
1987	96	32	68	361	3462

ಮಿಜೋರಾಂ ಒಪ್ಪಂದದ ಮೊದಲು ಟಿ.ಎನ್.ವಿ. ನಡೆಸಿದ 11 ದಾಳಿಗಳಲ್ಲಿ 21 ಜನ ಸತ್ತರು. ಆದರೆ ರಾಜೀವ್‌ಗಾಂಧಿ ಲಾಲ್‌ಡೆಂಗಾರೊಂದಿಗೆ ಒಪ್ಪಂದ ಮಾಡಿಕೊಂಡ ಮೇಲೆ ಇಂತಹ ದಾಳಿಗಳ ಸಂಖ್ಯೆ ಒಮ್ಮೆಗೇ ಹೆಚ್ಚಿತು. 16 ದಾಳಿಗಳಲ್ಲಿ 89 ಜನರನ್ನು ಅವರು ಕೊಂದಿದ್ದಾರೆ.

ಚುನಾವಣೆ ಘೋಷಣೆಯಾದ ನಂತರವಂತೂ ಟಿ. ಎನ್. ವಿ. ಉಗ್ರಗಾಮಿಗಳು 98ಜನರನ್ನು ಕೊಂದಿದ್ದಾರೆ. ಕೇಂದ್ರ ಸೇನಾ ತುಕಡಿಗಳನ್ನು ಕಳುಹಿಸಿದ ಮೇಲೂ ಸುಮಾರು 50 ಜನರನ್ನು ಅವರು ಕೊಂದಿದ್ದಾರೆ.

ತ್ರಿಪುರಾದ ಜನ ಜೀವನದ ಪ್ರಜಾಪ್ರಭುತ್ವೀಕರಣ ಈ ಒಂದು ದಶಕದ ಅತೀ ಮುಖ್ಯ ಸಾಧನೆ. ವರ್ಗ ಶತ್ರುಗಳನ್ನು ಹಿಮ್ಮೆಟ್ಟಿಸಬಹುದೆಂಬ ಭರವಸೆಯನ್ನು ದುಡಿಯುವ ಜನರಲ್ಲಿ ತುಂಬಿದ ವರ್ಷಗಳವು. ಪ್ರಜಾಪ್ರಭುತ್ವೀಕರಣದ ಪ್ರಕ್ರಿಯೆ ಪಂಚಾಯತುಗಳಲ್ಲಿ ಸ್ವಾಯತ್ತ ಜಿಲ್ಲಾ ಮಂಡಳಿಗಳಲ್ಲಿ ನಗರ ಸಭೆಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿವೆ. ಈ ಮೂಲಕ ಕಾರ್ಮಿಕ ಸಂಘಗಳನ್ನು ಕಿಸಾನ್ ಸಂಘಟನೆಗಳನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಒಳಗೊಳ್ಳುವುದು ಸಾಧ್ಯವಾಗಿದೆ. ದುಡಿಯುವ ಜನಗಳ ನ್ಯಾಯಬದ್ಧ ಬೇಡಿಕೆಗಳಿಗೆ ಇಲ್ಲಿ ಸದಾ ಬೆಂಬಲ ದೊರೆತಿದೆ. ಇತರ ರಾಜ್ಯಗಳಲ್ಲಿ ಮುಖ್ಯವಾಗಿ ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲಿ ಪರಿಸ್ಥಿತಿ ಇದಕ್ಕೆ ತದ್ವಿರುದ್ಧ ಎಂದು ನಮಗೆ ಗೊತ್ತೇಇದೆ.

ವಿವಿಧ ಜನಾಂಗಗಳ ನಡುವಿನ ಐಕ್ಯತೆಯ ರಕ್ಷಣೆಗಾಗಿ ಸಿ.ಪಿ.ಐ (ಎಂ)ನ 50ಕ್ಕೂ ಹೆಚ್ಚು ಸಂಗಾತಿಗಳು ತಮ್ಮ ಜೀವವನ್ನೇ ಬಲಿಕೊಟ್ಟಿದನ್ನು ಜನ ಕಂಡಿದ್ದಾರೆ.

ಕಾಂಗ್ರೆಸ್ ಆಳ್ವಿಕೆಯ ಕಾಲದಲ್ಲಿ ಬುಡಕಟ್ಟು ಜನಗಳನ್ನು ಶತ್ರುಗಳಂತೆ ಕಾಣಲಾಗುತ್ತಿತ್ತು. ಎಡರಂಗದ ಆಳ್ವಿಕೆಯಲ್ಲಿ ಈ ಭಾವನೆಯನ್ನು ಪೂರ್ಣವಾಗಿ ತೊಡೆದು ಹಾಕಲಾಗಿದೆ. ಜನಾಂಗೀಯ ಪಕ್ಷಪಾತವೆಂಬುದು ನಿರ್ನಾಮವಾಗಿದೆ. ಬುಡಕಟ್ಟು ಭೂಮಿಯನ್ನು ಬುಡಕಟ್ಟು ಜನಗಳಿಗೇ ಹಿಂದಿರುಗಿಸಲಾಗಿದೆ. ಉದ್ಯೋಗ ನೀಡುವಲ್ಲಿ ಅವರಿಗೆ ಆದ್ಯತೆ ನೀಡಲಾಗುತ್ತಿದೆ. ಸ್ವಾಯತ್ತ ಮಂಡಳಿಗಳನ್ನು ರಚಿಸಲಾಗಿದೆ.

ತ್ರಿಪುರಾದ ಜನತೆಯಲ್ಲಿ ಅಭಿವೃದ್ಧಿಯ ತೀವ್ರ ಆಕಾಂಕ್ಷೆಯಿದೆ. ಆದರೆ ಕೇಂದ್ರ ಸರ್ಕಾರ ಪ್ರಗತಿಗೆ ಅಡ್ಡವಾಗಿ ನಿಂತಿದೆ. ಎಡರಂಗ ಸರ್ಕಾರ ಈ ಪಕ್ಷಪಾತದ ವಿರುದ್ಧ ಜನತೆಯನ್ನು ಹೋರಾಟಕ್ಕಿಳಿಸಿದೆ.

ಚುನಾವಣೆ ಘೋಷಣೆಗಿಂತ ಸ್ವಲ್ಪ ಮೊದಲು ರಾಜ್ಯಕ್ಕೆ ಹೆಲಿಕ್ಯಾಪ್ಟರ್ ಭೇಟಿಯಿತ್ತ ಪ್ರಧಾನ ಮಂತ್ರಿಗಳು ಹಲವಾರು ಭರವಸೆಗಳನ್ನು ನೀಡಿ ಹೋದರು. ಅನಿಲ ಆಧಾರಿತ ಗೊಬ್ಬರ ಕಾರ್ಖಾನೆ, ಅಗರ್ತಲಾದಿಂದ ಕಲ್ಕತ್ತೆಗೆ ವಿಮಾನ ಪ್ರಯಾಣದಲ್ಲಿ ರಿಯಾಯಿತಿ, ಮಿಲಿಟರಿ ತರಬೇತಿ ಕಾಲೇಜು, ಅಗರ್ತಲಾದವರೆಗೆ ರೈಲು ಮಾರ್ಗ ವಿಸ್ತರಣೆ ಇತ್ಯಾದಿ ಅವರು ನೀಡಿದ ಚುನಾವಣಾ ಭರವಸೆಗಳಲ್ಲಿ ಎಲ್ಲವೂ ಕಳೆದ ಹತ್ತು ವರ್ಷಗಳಿಂದ ರಾಜ್ಯದ ಜನತೆ ಎಡರಂಗದ ನೇತೃತ್ವದಲ್ಲಿ ಒತ್ತಾಯಿಸುತ್ತಾ ಬಂದ ಬೇಡಿಕೆಗಳೇ, ಇದುವರೆಗೆ ಅದನ್ನು ನಿರಾಕರಿಸುತ್ತಾ ಬಂದಿರುವುದು ಕೇಂದ್ರದ ಕಾಂಗ್ರೆಸ್ ಸರ್ಕಾರವೇ ಎಂಬುದು ಜನರಿಗೆ ಚೆನ್ನಾಗಿ ತಿಳಿದಿದೆ.

ಈಗ ರಾಜ್ಯದಲ್ಲಿ ಇರುವ 25ಕಿ.ಮಿ ರೈಲು ಮಾರ್ಗ ರಚಿಸಲು ಕೇಂದ್ರ ಸರ್ಕಾರಕ್ಕೆ ಎಂಟು ವರ್ಷಗಳು ಬೇಕಾದವು. ಅದು ಅಗರ್ತಲಾ ತಲುಪಲು ಇನ್ನೂ 92 ಕಿ.ಮೀ. ದೂರವಿದೆ. ಇದಕ್ಕೆ ರಾಜೀವ ಗಾಂಧಿಯವರಿಗೆ ಇನ್ನೂ ಕನಿಷ್ಟ 30 ವರ್ಷಗಳಾದರೂ ಬೇಕಾದೀತೆಂದು ಜನ ಹೇಳುತ್ತಿದ್ದಾರೆ.

ಅಗರ್ತಲಾದ ಗೋಡೆಗಳೆಲ್ಲಾ ದೇಶದ ಸಮಗ್ರತೆ, ಐಕ್ಯತೆಯ ಘೋಷಣೆಗಳಿಂದ, ಬೊಫೋರ್ಸ್ ಹಗರಣ, ಸಾಲಮೇಳ ರಾಜಕೀಯ, ಮತ್ತು ವ್ಯಂಗ್ಯ ಚಿತ್ರಗಳಿಂದ ತುಂಬಿ ಹೋಗಿವೆ.

ಎಡರಂಗದ ಚುನಾವಣಾ ಘೋಷಣೆಯಲ್ಲಿ ಉದ್ಯೋಗದ ಹಕ್ಕನ್ನು ಮೂಲ ಭೂತ ಹಕ್ಕಾಗಿಸಬೇಕು, ಎಲ್ಲಾ ಜೀವನಾವಶ್ಯಕ ಸಾಮಗ್ರಿಗಳಿಗೆ ಕೇಂದ್ರ ಸಹಾಯ ಧನ ನೀಡಿ ರಿಯಾಯ್ತಿದರದಲ್ಲಿ ಹಂಚುವಂತೆ ಮಾಡಬೇಕು, ಮತದಾನದ ವಯಸ್ಸನ್ನು 18ಕ್ಕಿಳಿಸಬೇಕು, ಎನ್.ಎಸ್.ಎ. ಮೊದಲಾದ ಕರಾಳ ಶಾಸನಗಳನ್ನು ರದ್ದು ಮಾಡಬೇಕು ಹಾಗೂ ತ್ರಿಪುರಾಕ್ಕೆ ವಿಮಾನ ಮತ್ತು ರೈಲು ಸೇವೆಗಳನ್ನು ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರ

(5ನೇ ಪುಟ ನೋಡಿ)

ಕೇರಳದಲ್ಲಿ ಜಾತ್ಯಾತೀತ ಹಾಗೂ ಕೋಮುವಾದಿಗಳ ಹಣಾಹಣಿ

ಪೌರ ಚುನಾವಣೆಗಳಲ್ಲಿ ಎಡ ಪ್ರಜಾರಂಗದ ಮೇಲುಗೈ

ಕೇರಳದ ಈ ಪೌರ ಚುನಾವಣೆಗಳು ಕಾಂಗ್ರೆಸ ಬಿ.ಜೆ.ಪಿ. ವಿರೋಧಿ ಮುಖವಾಡವನ್ನು ಬಿ.ಜೆ.ಪಿ.ಯ 'ತೀವ್ರ' ಕಾಂಗ್ರೆ ವಿರೋಧಿ ಮುಖವಾಡವನ್ನು ಮಾತ್ರವಲ್ಲ ಎಲ್ಲಾ ಬಂಡವಾಳಶಾಹಿ, ಕೋಮುವಾದಿ ಪಕ್ಷಗಳ ಮುಖವಾಡವನ್ನು ಕಿತ್ತೊಗೆದು ನಿಜರೂಪವನ್ನು ಬಯಲಿಗೆಳೆದಿದೆ.

ಕೇರಳದಲ್ಲಿ ಎಲ್.ಡಿ.ಎಫ್. ಚುನಾವಣೆಗಳಲ್ಲಿ ವಿಜಯಗಳಿಸಿದ ಕ್ಷಣದಲ್ಲಿಯೇ ಕಾ.ಇ.ಎಂ.ಎಸ್.ರವರು ಕೋಮುವಾದಿ ಹಾಗೂ ಜಾತ್ಯಾತೀತತೆಯ ನಡುವಣ ಹೋರಾಟ ಈ ವಿಜಯದೊಂದಿಗೆ ಮುಗಿಯಲಿಲ್ಲ. ಈಗ ತಾನೇ ಆರಂಭವಾಗಿದೆ. ಮುಂದೆ ಈ ಕೋಮುವಾದಿಗಳ ಚಟುವಟಿಕೆ ತೀವ್ರಗೊಳ್ಳಲಿವೆ ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಬೇಕು.

ಒಂದು ಕಡೆ ಗುತ್ತೇದಾರಿ ಬಂಡವಾಳಶಾಹಿ ನೇತೃತ್ವದ ಆಳುವ ವರ್ಗಗಳ ಕೇಂದ್ರ ಸರ್ಕಾರ ತನ್ನ ಅಳವಿನೊಳಗಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ ಆರ್ಥಿಕವಾಗಿ ಕೇರಳ ಸರ್ಕಾರದ ಕತ್ತು ಹಿಸುಕಲು ನಡೆಸುವ ಪ್ರಯತ್ನ ಮತ್ತೊಂದು ಕಡೆ ಕೇರಳದ ಒಳಗೆ ಬಂಡವಾಳಶಾಹಿ-ಭೂಮಾಲಕ ಶಕ್ತಿಗಳು, ಮೇಲೆ ಮೇಲೆ ಬೇರೆ ಎಂಬಂತೆ ತೋರಿಸಿಕೊಂಡರೂ ಒಳಗೊಳಗೇ ಒಂದಾಗಿ ಬಿ.ಜೆ.ಪಿ, ಮುಸ್ಲಿಂಲೀಗ್, ಕ್ರಿಶ್ಚಿಯನ್ನರ ಪಕ್ಷಗಳು ಎಲ್ಲಾ ಕಡೆಗಳಲ್ಲಿಯೂ ಉಂಟು ಮಾಡುತ್ತಿರುವ ಗೊಂದಲ, ಹಿಂಸಾಚಾರ, ಎಡಶಕ್ತಿಗಳ ಮೇಲೆ ಮುಖ್ಯವಾಗಿ ಸಿ.ಪಿ.ಐ.[ಎಂ] ಕಾರ್ಯಕರ್ತರ ಮೇಲೆ ಧಾಳಿ.

ಒಂದು ಕಡೆ ಬರಗಾಲ ನಿವಾರಣೆಗೆ 150ಕೋಟಿ ರೂ. ಹಣ ಕೇಳಿದರೆ 10 ಕೋಟಿ ನೀಡುವ ಬೆಲೆ ಏರಿಕೆ ಮಾಡುವ

[6 ನೇ ಪುಟ ನೋಡಿ]

ಕೇರಳ ಜನತೆಗೆ ಪಿ.ಬಿ. ಅಭಿನಂದನೆ

ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೋ ಇತ್ತೀಚೆಗೆ ಮೂರು ಕಾರ್ಪೊರೇಷನ್‌ಗಳು, 43 ಮುನಿಸಿಪಾಲಿಟಿಗಳು, ಮತ್ತು 999 ಪಂಚಾಯತುಗಳಿಗೆ ನಡೆದ ಚುನಾವಣೆಗಳಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ ಪ್ರಶಂಸಾರ್ಹ ಯಶಸ್ಸಿಗಾಗಿ ರಂಗದ ನಾಯಕರು ಮತ್ತು ಕಾರ್ಯಕರ್ತರನ್ನು ಅಭಿನಂದಿಸುತ್ತದೆ.

ಮಾರ್ಚ್ 23ರ ವಿಧಾನಸಭಾ ಚುನಾವಣೆಯಲ್ಲಿ ಭಾಗವಹಿಸಿದ ಬಿ ಜೆ.ಪಿ-ಹಿಂದೂ ಮುನ್ನಾಸಿ ಕೂಟ, ಜೂನ್ 2ರ 2 ಮರು ಚುನಾವಣೆಗಳ ಹೊತ್ತಿಗೆ ಇಲ್ಲವಾಗಿತ್ತು. ಮೊದಲೇ ಎರಡು ಕ್ಷೇತ್ರಗಳಿಗೆ ಈ ಕೂಟ ತನ್ನ ಉಮೇದುವಾರರನ್ನು ನೆಪ ಮಾತ್ರಕ್ಕೆ ನಿಲ್ಲಿಸಿದ್ದರೂ, ಯು ಡಿ.ಎಫ್.ನ ಅಭ್ಯರ್ಥಿಗಳ ಜಯಕ್ಕಾಗಿ ಕೆಲಸ ಮಾಡಿತು. ಇದು ಇತ್ತೀಚಿಗೆ ನಡೆದ ಸ್ಥಳೀಯ ಚುನಾವಣೆಗಳಲ್ಲೂ ಮುಂದುವರಿಯಿತು. ಯು.ಡಿ ಎಫ್, ಬಿ.ಜೆ.ಪಿ. ಜತೆ ಹೊಂದಾಣಿಕೆಯನ್ನು ಗುಟ್ಟಾಗಿಡಲು ಅಂತಹ ಪ್ರಯತ್ನವೇನನ್ನೂ ಮಾಡಲಿಲ್ಲ. ಕಳೆದ ಮಾರ್ಚ್‌ನ ಎರಡೂ ಎಡರಂಗ ವಿರೋಧಿ ರಂಗಗಳು ಯಾವ ರೀತಿ ತಮ್ಮ ಸಮಾನ ವೈರಿಯ ವಿರುದ್ಧ ಹೋರಾಡಲು ಒಂದಾಗಿದ್ದವು, ಎಂದು ಕಮ್ಯುನಿಸ್ಟ ವಿರೋಧಿ ಪತ್ರಿಕೆಗಳು ಮಾತ್ರವಲ್ಲವೆ, ಇಂಡಿಯನ್ ಎಕ್ಸ್‌ಪ್ರೆಸ್ ಕೊಚ್ಚಿನ್ ಸಂಚಿಕೆಗಳು ಸಾಧಾರಣವಾಗಿ ವರದಿಮಾಡಿದ್ದವು. ಕೇರಳದಲ್ಲಿ ಯಾರೂ ಚುನಾವಣೆ ಮುನ್ನ ಬಿ.ಜೆ.ಪಿ. ಅಧ್ಯಕ್ಷ ಅದ್ವಾನಿ ಈ ಬಗ್ಗೆ ಅಲ್ಲಗಳೆದದ್ದನ್ನು ನಂಬಲು ತಯಾರಿಲ್ಲ. ಅಷ್ಟೇ ಅಲ್ಲದೆ "ಎರಡು ಪ್ರತಿ ಸ್ಪರ್ಧಿಗಳನ್ನು ಯು. ಡಿ. ಎಫ್. ಮತ್ತು ಎಲ್. ಡಿ. ಎಫ್. ಎದುರಿಸಿ ಹೋರಾಡಿ" ಮುನಿಸಿಪಾಲಿಟಿಗಳಲ್ಲಿ ಕೆಲವು ಸೀಟುಗಳನ್ನು ಮತ್ತು ಕೆಲವು ಪಂಚಾಯತುಗಳನ್ನು ಗೆದ್ದುಕೊಂಡಿದ್ದೇವೆ ಎಂಬ ಅವರ ಹೆಗ್ಗಳಿಕೆಯನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಯು.ಡಿ ಎಫ್. ಮತ್ತು ಬಿ.ಜೆ.ಪಿ.ಯ ಎಲ್ಲಾ ಶಕ್ತಿಗಳನ್ನು ಕ್ರೋಢಿಕರಿಸಿದ್ದರಿಂದ ಮಾತ್ರ ಇದು ಸಾಧ್ಯವಾಗಿದೆ.

ಮಾರ್ಚ್ ವಿಧಾನಸಭಾ ಚುನಾವಣೆಗಳಲ್ಲಿ ಯು. ಡಿ. ಎಫ್. ಶೇಕಡಾ 43 ಮತಗಳನ್ನು ತೆಗೆದುಕೊಂಡರೆ. ಬಿ.ಜೆ ಪಿ ಶೇಕಡಾ 6 ಮತ್ತು ಯು.ಡಿ.ಎಫ್. ಶೇಕಡಾ44 ಮತಗಳನ್ನು ತೆಗೆದುಕೊಂಡಿತ್ತು. ಬಿ.ಜೆ.ಪಿ-ಯು.ಡಿ.ಎಫ್. ಕೂಟದ ಒಟ್ಟು ಬಲ ಶೇಕಡಾ 50 ರಷ್ಟು ಯು ಡಿ.ಎಫ್. ಗಿಂತಲೂ ಪ್ರಬಲ ಕೂಟವಾಗ ಬೇಕಾಗಿತ್ತು. ಆದರೆ ಈ ಹೊಂದಾಣಿಕೆ ಇದ್ದಾಗ್ಯೂ ಎಲ್.ಡಿ.ಎಫ್, 3 ಕಾರ್ಪೊರೇಷನ್‌ಗಳಲ್ಲಿ 2ನ್ನು ಗೆದ್ದು 3ನೇಯದರಲ್ಲಿ ಅತಿ ದೊಡ್ಡ ಶಕ್ತಿಯಾಗಿದೆ. ಮತ್ತು ಪಂಚಾಯತುಗಳಲ್ಲಿ ಬಹುಮತ ಪಡೆದಿದೆ. ಬಿ.ಜೆ.ಪಿ. ಮತ್ತು ಯು.ಡಿ.ಎಫ್. ಹೊಂದಾಣಿಕೆ ಮಾಡಿಕೊಂಡಿರದಿದ್ದರೆ ಅವರು ಯು.ಡಿ ಎಫ್.ನಿಂದ ಇನ್ನಷ್ಟು ದೊಡ್ಡ ಪರಾಭವ ಅನುಭವಿಸಬೇಕಾಗಿ ಬರುತ್ತಿತ್ತು. ಈ ಕೂಟದ ಸವಾಲನ್ನು ಎಲ್.ಡಿ.ಎಫ್. ಸಮರ್ಥವಾಗಿ ಎದುರಿಸಿದೆ.

1979ರ ಚುನಾವಣಾ ಫಲಿತಾಂಶಗಳನ್ನು ಈ ಬಾರಿಯ ಫಲಿತಾಂಶಗಳೊಂದಿಗೆ ಹೋಲಿಸುವುದು (ಕೆಲವು ಅಂಕಣಕಾರರು ಮಾಡಿರುವಂತೆ) ಅರ್ಥಹೀನವಾದ್ದು. 1979 ಚುನಾವಣೆ ನಡೆದಾಗ ಯು ಡಿ. ಎಫ್. ಶಿಥಿಲವಾಗುತ್ತಾ ಬಂದಿತು. ಆಗ ಯು.ಡಿ.ಎಫ್. ಸಿ ಪಿ.ಐ, ಆರ್.ಎಸ್ ಪಿ, ಕೇರಳ ಕಾಂಗ್ರೆಸ್ ಮತ್ತು ಅಂಥೋನಿ ಕಾಂಗ್ರೆಸ್ಸುಗಳನ್ನು ಒಳಗೂಡಿತ್ತು. ಯು.ಡಿ ಎಫ್. ಸರಕಾರ ಮುಂದುವರಿದರೂ ಅದರ ಅಂಗವಾದ ಪಕ್ಷಗಳಲ್ಲಿ ಅತೃಪ್ತಿ ಹಬ್ಬಿತ್ತು. ಯು.ಡಿ ಎಫ್.ನಲ್ಲಿ ಗೊಂದಲವಿದ್ದುದರಿಂದ ಮತ್ತು ಅದರವಿರುದ್ಧ ಹೋರಾಡುವ ಶಕ್ತಿಗಳಲ್ಲಿ ಸಿ.ಪಿ.ಐ (ಎಂ) ಅತಿ ದೊಡ್ಡದಾದ್ದರಿಂದ ಭಾರಿ ಗೆಲುವು ಸಾಧಿಸಿತು.

ಇಂದು ಎರಡು ರಂಗಗಳೂ ಕ್ರೋಢಿಕೃತವಾಗಿವೆ. ಕಾಂಗ್ರೆಸ್ ನಾಯಕತ್ವದ ಜಾತಿ ಮತ್ತು ಕೋಮುವಾದಿ ಶಕ್ತಿಗಳು ಒಂದು ಕಡೆಗಾದರೆ, ಎಡ ಮತ್ತು ಜಾತ್ಯತೀತ ಶಕ್ತಿಗಳು ಇನ್ನೊಂದೆಡೆ. ಮಾರ್ಚ್ ವಿಧಾನಸಭಾ ಚುನಾವಣೆಗಳಲ್ಲಿ ಇನ್ನೂ ಆಗಿರದಿದ್ದ ಬಿ ಜೆ.ಪಿ-ಯು.ಡಿ ಎಫ್. ಕ್ರೋಢಿಕರಣ ಈಗ ಆಗಿದೆ. ಆದ್ದರಿಂದ ಯು ಡಿ.ಎಫ್.ನ ಸಂಘರ್ಷ ತೀವ್ರವಾಗಿತ್ತು. ಇದರಲ್ಲಿ ಎಲ್.ಡಿ.ಎಫ್. ಪ್ರಶಂಸಾರ್ಹವಾಗಿ ಗೆದ್ದಿದೆ.

ಯು ಡಿ ಎಫ್. ಈ ಹೋರಾಟವನ್ನು ಇನ್ನಷ್ಟು ಬಲಪಡಿಸಲು ಸತತ ಪ್ರಯತ್ನಗಳನ್ನು ಮಾಡುತ್ತದೆ ಎಂಬ ಪಿ ಬಿ. ತನ್ನ ಆಶಯ ವ್ಯಕ್ತಪಡಿಸುತ್ತದೆ.

ಕೇರಳ ಸ್ಥಳೀಯ ಚುನಾವಣೆ ಫಲಿತಾಂಶ

	LDF	UDF	BJP	ಪಕ್ಷೇತರರು	ಒಟ್ಟು
1. ಕಾರ್ಪೊರೇಷನ್‌ಗಳು					
(i) ತ್ರಿವೇಂದ್ರಮ್	25	18	6	1	50
(ii) ಕ್ಯಾಲಿಕಟ್	31	19	–	–	50
(iii) ಕೊಚ್ಚಿನ್	30	17	1	1	49
ಒಟ್ಟು	86	54	7	2	149
2. ಪಂಚಾಯತ್‌ಗಳು	469	437	2	91	999
				(ಯಾರಿಗೂ ಬಹುಮತ ಇಲ್ಲ)	
3. ಮುನಿಸಿಪಾಲಿಟಿಗಳು	15	25	–	3	43
				(ಯಾರಿಗೂ ಬಹುಮತವಿಲ್ಲ)	

(4ನೇ ಪುಟದಿಂದ)

ನಡೆಸಿತು. ಇವರಲ್ಲಿ ಕನಿಷ್ಟ ಮೂವರು ಮಾರು ವೇಷದಲ್ಲಿದ್ದ ಬಿ.ಎಸ್.ಎಫ್. ಸೈನಿಕರು ! ಬಿಲೋನಿಯಾದಲ್ಲಿ ನಡೆದ ಇನ್ನೊಂದು ಘಟನೆಯಲ್ಲಿ ಒಂದು ಸರ್ವ ಪಕ್ಷ ಶಾಂತಿ ಸಮಾವೇಶದಲ್ಲಿ ಸಿ.ಆರ್.ಪಿ. ಪೋಲಿಸರು ಸಿ.ಪಿ ಐ. (ಎಂ) ಕಾರ್ಯಕರ್ತರ ಮೇಲೆ ಲಾಠೀ ಪ್ರಹಾರ ನಡೆಸಿದರು. ಈ ಸಬ್‌ಡಿವಿಜನ್ನಿನಲ್ಲಿ ಬಿ.ಎಸ್.ಎಫ್. ನೆರವು ಕೋರಿ ಕಾಂಗ್ರೆಸ್ (ಐ) ಬರೆದ ಪತ್ರ ಈ ಮೊದಲೇ ಬೆಳಕಿಗೆ ಬಂದಿತ್ತು. ಗೋವಿಂದ ಬಾಡಿಯಲ್ಲಿ ಜನವರಿ 11 ರಂದು ಮುಖ್ಯ ಮಂತ್ರಿಯವರ ಸಭೆಯನ್ನೇ ಬಿ.ಎಸ್.ಎಫ್. ರದ್ದು ಮಾಡಿತ್ತು !

ಕಾಂಗ್ರೆಸ್ (ಐ) ಅವನತಿ

ಕಾಂಗ್ರೆಸ್ (ಐ) ನ ಈ ಹಿಂಸಾಚಾರ ಅನಿರೀಕ್ಷಿತವೇನೂ ಅಲ್ಲ.ಏಕೆಂದರೆ ರಾಜ್ಯದಲ್ಲಿ ಕಾಂಗ್ರೆಸ್ (ಐ) ನ ಅವನತಿಯು ಒಂದು ಇತಿಹಾಸವೇ ಇದೆ. ಕಾಂಗ್ರೆಸ್ (ಐ) ಇಲ್ಲಿ ಆಳುವ ಪಕ್ಷವಾಗಿದ್ದಾಗಲೂ ಗುಂಪುಗಾರಿಕೆ ಕಾಂಗ್ರೆಸ್ (ಐ) ನ ಅಭಿನ್ನ ಅಂಗವಾಗಿತ್ತು. ಅಧಿಕಾರ ಕಳಕೊಂಡ ಮೇಲೆ ಸಂಘಟನೆಯನ್ನು ಹೇಗಾದರೂ ಒಂದಾಗಿಟ್ಟಿದ್ದ ಆ ಒಂದು ಪ್ರಮುಖ ಆಧಾರವೂ ಇಲ್ಲವಾಗಿ ಗುಂಪುಗಾರಿಕೆ ಉಲ್ಬಣಗೊಂಡಿತು. ಜೊತೆಗೆ ಎಡರಂಗ ಸರ್ಕಾರ ಬಂದ ಕೂಡಲೇ ಆರಂಭಿಸಿದ ಜನಪರ ಕ್ರಮಗಳು ಕಾಂಗ್ರೆಸ್ (ಐ) ಗೆ ಅಳಿದುಳಿದ ಜನ ಬೆಂಬಲವನ್ನು ಇಲ್ಲವಾಗಿಸಿತು. ಜನ ಬೆಂಬಲ ಮತ್ತು ಪ್ರಜಾಪ್ರಭುತ್ವ ಹೋರಾಟವಿಲ್ಲದ ರಾಜಕೀಯ ಪಕ್ಷ ಹೇಗೆ ತಾನೇ ಬದುಕುಳಿಯಲು ಸಾಧ್ಯ ? ಆದ್ದರಿಂದ ಹೇಗಾದರೂ ಮಾಡಿ ಅಧಿಕಾರ ಕಸಿದುಕೊಳ್ಳಲು ಅಡ್ಡದಾರಿ ಹಿಡಿಯಲು ಇಲ್ಲಿನ ಕಾಂಗ್ರೆಸ್ (ಐ) ಮುಖಂಡತ್ವ ನಿರ್ಧರಿಸಿ ಅಪಾರ ಸಂಖ್ಯೆಯಲ್ಲಿ ಸಮಾಜ ವಿರೋಧಿ ವ್ಯಕ್ತಿಗಳು ಹಾಗೂ ಶಿಕ್ಷೆಗೆ ಗುರಿಯಾದ ಕ್ರಿಮಿನಲ್‌ಗಳನ್ನು ತನ್ನ ಸದಸ್ಯರನ್ನಾಗಿ ಮಾಡಿಕೊಂಡಿತು. ಈಗ ಇಂತಹವರಲ್ಲಿ ಕೆಲವರು ಪ್ರದೇಶ ಕಾಂಗ್ರೆ ಸಮಿತಿಯ ಸದಸ್ಯ ಸ್ಥಾನಕ್ಕೂ ಏರಿದ್ದಾರೆ.

ಕಾಂಗ್ರೆಸ್ (ಐ) ನಲ್ಲಿ ಸಮಾಜ ವಿರೋಧಿ ವ್ಯಕ್ತಿಗಳಿದ್ದಾರೆ, ಅವರಿಗೆ ವಿಧಾನ ಸಭಾ ಟಿಕೇಟುಗಳನ್ನು ಕೂಡಾ ಕೊಡಲಾಗಿದೆ ಎಂದು ಕೇಂದ್ರ ಮಂತ್ರಿ ಸಂತೋಷ ಮೋಹನಾ ದೇಬ್ ಕೂಡಾ ಒಪ್ಪಿಕೊಂಡಿದ್ದಾರೆ. ಹೇಗಾದರೂ ಚುನಾವಣೆ ಗೆಲ್ಲುವುದು ಮುಖ್ಯ ಎಂದು ಅವರು ಬಹಿರಂಗವಾಗಿಯೇ ಹೇಳಿದ್ದಾರೆ. ಅಧಿಕಾರದಲ್ಲಿದ್ದಾಗ ಎಲ್ಲಾ ಸಮಾಜ ವಿರೋಧಿ ವ್ಯಕ್ತಿಗಳ ಆಶ್ರಯದಾತನಾಗಿದ್ದ ಮಾಜೀ ಕಾಂಗ್ರೆಸ್ ಮುಖ್ಯ ಮಂತ್ರಿ ಸಚಿನ್ ಸಿಂಗ್ ಈ ಬಾರಿ ಕಾಂಗ್ರೆ ಪ್ರಚಾರದ ಸಂಯೋಜಕರು ! ಸಮಾಜ–ವಿರೋಧಿ ವ್ಯಕ್ತಿಗಳಿಗೆ ಟಿಕೇಟು ಕೊಡುವ ಭರದಲ್ಲಿ ಇನ್ನೊಬ್ಬ ಮಾಜಿ ಮುಖ್ಯ ಮಂತ್ರಿ ಸುಖಮಯ್ ಸೆನ್ ಗುಪ್ತಾ ಹಾಗೂ ಮಾಜೀ ಕಾಂಗ್ರೆ. ಅಧ್ಯಕ್ಷ ಅಶೋಕ ಭಟ್ಟಾ ಚಾರ್ಜಿಗೂ ಟಿಕೇಟು ನಿರಾಕರಿಸಲಾಯಿತು. ●

[4ನೇ ಪುಟದಿಂದ]

ವನ್ನು ಒತ್ತಾಯಿಸಲಾಗಿದೆ. ಭೂಹೀನ ಕಾರ್ಮಿಕರಿಗೆ ವರ್ಷಕ್ಕೆ ಕನಿಷ್ಟ 100 ದಿನಗಳ ಕೆಲಸ, ಅಸಂಘಟಿತ ಕಾರ್ಮಿಕರಿಗೆ ವಸತಿ, ಕಾಂಟ್ರಾಕ್ಟ ಪದ್ಧತಿಯ ರದ್ಧತಿ, ಕನಿಷ್ಟ ಕೂಲಿಯಲ್ಲಿ ಹೆಚ್ಚಳ ಹಾಗೂ ಪ್ರತಿ ಮೂರು ಮೈಲಿಗೊಂದು ಹೈಸ್ಕೂಲನ್ನು ತೆರೆಯುವ ವಚನ ನೀಡಿದೆ.

ಕಾಂಗ್ರೆಸ್ (ಐ) ಮತ್ತು ಟಿ.ಯು. ಜೆ.ಎಸ್. ಚುನಾವಣಾ ಘೋಷಣೆಗಳನ್ನು ಹೊರಡಿಸಿದ್ದರೂ ಚುನಾವಣಾ ಪ್ರಚಾರದಲ್ಲಿ ಅವರು ಅದನ್ನು ಎಂದೂ ಬಳಸಿಲ್ಲ. ಬದಲಾಗಿ ಆಮಿಷ, ಅದಕ್ಕೆ ಬಗ್ಗದಿದ್ದರೆ ಭಯೋತ್ಪಾದಕತೆ ಇದೇ ಅವರ ಚುನಾವಣಾ ತಂತ್ರ ಎಂಬುದು ಸ್ಪಷ್ಟವಾಗಿ ಕಾಣುತ್ತಿತ್ತು, ತದ್ವಿರುದ್ಧವಾಗಿ ಎಡರಂಗ ಪ್ರಚಾರದ ಚಿತ್ರತದ್ವಿರುದ್ಧವಾಗಿತ್ತು. ಇದನ್ನು ಬೂರ್ಜ್ವಾ ಪತ್ರಿಕೆಗಳ ವರದಿಗಾರರೂ ಗಮನಿಸಿದ್ದಾರೆ.ಅಲ್ಲದೆ ಅವರು ಮೇಘಾಲಯದಲ್ಲಿ ಹಾಗೂ ತ್ರಿಪುರಾದಲ್ಲಿ ಚುನಾವಣಾ ಪ್ರಚಾರಗಳನ್ನು ಹೋಲಿಸುತ್ತಾ ಮೇಘಾಲಯದಲ್ಲಿ ಕೇವಲ ಸ್ಥಳೀಯ ಪ್ರಶ್ನೆಗಳೇ ಚರ್ಚಿಸಲ್ಪಡುತ್ತಿರುವಾಗ ತ್ರಿಪುರಾದಲ್ಲಿ ಎಡರಂಗದ ಪ್ರಚಾರದಿಂದಾಗಿ ಸ್ಥಳೀಯ ಪ್ರಶ್ನೆಗಳು ರಾಷ್ಟ್ರೀಯ ಸಮಸ್ಯೆಗಳ ಹಿನ್ನೆಲೆಯಲ್ಲಿ ಚರ್ಚಿಸಲ್ಪಡುತ್ತಿವೆ ಎಂದೂ ಗಮನಿಸಿದ್ದಾರೆ.

ಎಲ್ಲಾ ಹಂತಗಳಲ್ಲಿ ಎಡರಂಗ ಚುನಾವಣಾ ಪ್ರಚಾರ ಸಮಿತಿಗಳು ಪರಸ್ಪರ ಸಂಯೋಜಿತ ರೀತಿಯಲ್ಲಿ ಸಂಘಟಿಸಲ್ಪಟ್ಟು ಮನೆ ಮನೆಗೆ ಹೋಗುವುದು, ಸಣ್ಣ ಗುಂಪು ಸಭೆ, ದೊಡ್ಡ ಬಹಿರಂಗ ಸಭೆ, ಸ್ಕ್ವಾಡ್‌ಗಳು, ಮಹಿಳೆಯರ, ಕಾರ್ಮಿಕರ, ರೈತರ, ಕಲಾವಿದರ, ಬುದ್ಧಿ ಜೀವಿಗಳ ಪ್ರತ್ಯೇಕ ಮೆರವಣಿಗೆಗಳು ಇತ್ಯಾದಿಗಳ ಮೂಲಕ ಎಡರಂಗದ ನಿಲುವನ್ನು ಬಿಂಬಿಸಲಾಗುತ್ತಿತ್ತು.

ಚುನಾವಣಾ ಸಭೆಗಳಲ್ಲಿ ನೃಪೇನ್ ಚಕ್ರವರ್ತಿ, ದಶರಥ್ ದೇಬ್ ಹಾಗೂ ಇತರ ರಾಜ್ಯ ಮುಖಂಡರಲ್ಲದೆ ಜ್ಯೋತಿ ಬಸು, ಇ.ಎಂ.ಎಸ್ ಬಿ. ಟಿ. ಆರ್, ಸಮರ ಮುಖರ್ಜಿ ಹಾಗೂ ಪಶ್ಚಿಮ ಬಂಗಾಳದ ಮುಖಂಡರಾದ ಬಿಮಾನ್ ಬಸು, ಮಹಮ್ಮದ್ ಅಮೀನ್ ಮುಂತಾದವರು ಭಾಗವಹಿಸುತ್ತಿದ್ದಾರೆ. ಡಿಸೆಂಬರ್ 22ರಂದು ಜ್ಯೋತಿ ಬಸುರವರು ಮಾಡಿದ ಭಾಷಣವನ್ನು 80 ಸಾವಿರ ಜನ ಆಲಿಸಿದರು. ●

[4ನೇ ಪುಟದಿಂದ]

ಕೇರಳ ಸರ್ಕಾರದ ಚೆಕ್‌ಗಳಿಗೆ ಹಣ ನೀಡಬೇಡಿ ಎಂದು ರಿಸರ್ವ್‌ಬ್ಯಾಂಕ್‌ಗೆ ಆದೇಶ ನೀಡುವ ಕಾಂಗ್ರೆ ನೇತೃತ್ವದ ಕೇಂದ್ರ ಸರಕಾರ; ಮತ್ತೊಂದು ಕಡೆ ಎಡ ಪ್ರಜಾರಂಗ ಅಸ್ತಿತ್ವಕ್ಕೆ ಬಂದ ಮೇಲೆ ಬೆಲೆ ಏರಿಕೆ ವಿಪರೀತವಾಗಿದೆ, ಕೇರಳ ಸರ್ಕಾರ ದಿವಾಳಿಯಾಗಿದೆ, ಬರಗಾಲ ಪೀಡಿತ ಜನರಿಗೆ ಕೇರಳ ಸರ್ಕಾರ ಪರಿಹಾರ ಒದಗಿಸುತ್ತಿಲ್ಲ ಎಂದು ಬೊಬ್ಬೆಹಾಕುವ ಅದೇ ಕಾಂಗ್ರೆ ನೇತೃತ್ವದ ಕೂಟ.

ಇಂತಹ ಪರಿಸ್ಥಿತಿಯಲ್ಲಿ ಇತ್ತೀಚೆಗೆ ತಾನೇ ಚುನಾಯಿತವಾಗಿ ಅಧಿಕಾರಕ್ಕೆ ಬಂದ ಎಡ ಪ್ರಜಾಪ್ರಭುತ್ವ ರಂಗ ಸರ್ಕಾರ ಅಧಿಕಾರದಲ್ಲಿ ಸ್ಥಿರವಾಗಲು ಬಿಡಬಾರದು ಎಂದು ನಿರಂತರವಾಗಿ ಮೇಲಿನಿಂದ ಹಾಗೂ ಕೆಳಗಿನಿಂದ ಅಸ್ಥಿರಗೊಳಿಸುವ ಚಟುವಟಿಕೆಯನ್ನು ನಡೆಸುತ್ತಿರುವ ಹಿನ್ನೆಲೆಯಲ್ಲಿ ಎಡ ಪ್ರಜಾರಂಗ ತನ್ನ ಚುನಾವಣಾ ಆಶ್ವಾಸನೆಯಂತೆ ನಾಲ್ಕು ವರ್ಷಗಳಿಂದ ಅಧಿಕಾರಿಗಳ ವಶದಲ್ಲಿದ್ದ ಪೌರ ಸಂಸ್ಥೆಗಳಿಗೆ ಏಕ ಕಾಲದಲ್ಲಿ ಚುನಾವಣೆ ನಡೆಸಿತು.

ಈ ಚುನಾವಣೆಗಳಲ್ಲಿ, ವಿಧಾನಸಭಾ ಚುನಾವಣೆಗಳಲ್ಲಿ ಬೇರೆ ಬೇರೆಯಾಗಿದ್ದ ಕಾಂಗ್ರೆ, ಬಿ.ಜೆ.ಪಿ.ಗಳು ಒಳಗೊಳಗೇ ಒಪ್ಪಂದ ಮಾಡಿಕೊಂಡು ಚುನಾವಣೆಗೆ ನಿಂತರೂ ಎಡ ಪ್ರಜಾರಂಗವನ್ನು ಸೋಲಿಸಲಾಗಲಿಲ್ಲ.

ವಿರೋಧಾಭಾಸಗಳ ಸಂಗಮ

ಯು.ಡಿ.ಎಫ್. ಎಂಬ ಈ ಕೂಟವನ್ನು ನೋಡಿ ಇದು ಎಲ್ಲಾ ವಿರೋಧಾಭಾಸಗಳ ಸಂಗಮವಾಗಿದೆ ಎಂದು ಬಣ್ಣಿಸಿದವರು ಎಡ ಪ್ರಜಾರಂಗದ ರಾಜ್ಯ ಸಮಿತಿಯ ಸಂಚಾಲಕ ಕಾಂ. ಎಂ.ಎಂ.ಲಾರೆನ್ಸ್. ಇಲ್ಲಿಯವರೆಗೂ ಗಾಂಧಿಯವರ ಹೆಸರು ಹೇಳುತ್ತಾ ಮತ ಪಡೆದ ಕಾಂಗ್ರೆ ಇಂದು ಗಾಂಧಿಯವರನ್ನೇ ಕೊಲೆ ಮಾಡಿದ ಆರೆಸ್ಸೆಸ್ ಜೊತೆಯಲ್ಲಿ ಹೆಗಲಿಗೆ ಹೆಗಲು ಕೂಡಿಸಿ ನಡೆದಿದೆ. ನಾನು ಕಾಂಗ್ರೆ ವಿರೋಧಿ, ಕಾಂಗ್ರೆಗೆ ಏಕೈಕ ಪರ್ಯಾಯ ಎನ್ನುವ ಬಿ.ಜೆ.ಪಿ, ರಾಷ್ಟ್ರಮಟ್ಟದಲ್ಲಿ ಕೇರಳದ ಎಡ ಪ್ರಜಾರಂಗದ ಸಹ ಭಾಗಿಗಳಾದ ಜನತಾ ಮತ್ತು ಲೋಕದಳವನ್ನು ತನ್ನೊಂದಿಗೆ ಸೆಳೆದುಕೊಳ್ಳ ಬಯಸುವ ಬಿ.ಜೆ.ಪಿ. ಕೇರಳದಲ್ಲಿ ಅನೈತಿಕಮೈತ್ರಿ ಮಾಡಿಕೊಂಡಿದೆ. ಹಿಂದೂ ರಾಷ್ಟ್ರವನ್ನ ಕಟ್ಟಬೇಕೆನ್ನುವ ಬಿ.ಜೆ.ಪಿ. ಮುಸ್ಲಿಂ ಲೀಗ್ ಜೊತೆಗಿರುವ ಯು.ಡಿ.ಎಫ್.ನೊಂದಿಗೆ ಮೈತ್ರಿ. ಭಾರತ ಹಿಂದೂ ರಾಷ್ಟ್ರವಾಗಬೇಕು ಉಳಿದವರೆಲ್ಲಾ ಇಲ್ಲಿ ಎರಡನೆಯ ದರ್ಜೆ ಪ್ರಜೆಗಳಂತಿರಬೇಕು ಇಲ್ಲವೇ ತೊಲಗಬೇಕು ಎನ್ನುವ ಈ ಹಿಂದೂವಾದದವಿರುದ್ಧವಾಗಿ ಅಲ್ಪಸಂಖ್ಯಾತರ ರಕ್ಷಣೆ ಮಾಡುತ್ತೇವೆಂದು ತೋರಿಸಿಕೊಳ್ಳುವ ಮುಸ್ಲಿಂಲೀಗ್ ಹಾಗೂ ಕ್ರಿಶ್ಚಿಯನ್ನರ ಕೇರಳ ಕಾಂಗ್ರೆಸ್ ಪಕ್ಷಗಳಿಗೆ ಆ ಹಿಂದೂವಾದಿಗಳ ಜೊತೆಗೂಡಲು ಯಾವ ನಾಚಿಕೆಯೂ ಇಲ್ಲ.

ಫಿಕರ್ನಾ ಅಡಿಕೆ ಬೆಳೆಗಾರರ ಸಮಾವೇಶ

ದಿವಾಳಿ ಅಂಚಿಗೆ ದೂಡಲ್ಪಟ್ಟಿರುವ ಅಡಿಕೆ ಬೆಳೆಗಾರರ ಹಿತ ರಕ್ಷಣೆಗಾಗಿ ರಾಜ್ಯಸರ್ಕಾರ ಹಾಗೂ ಕೇಂದ್ರ ಪ್ರಮಾಣಿಕವಾದ ಪ್ರಯತ್ನ ನಡೆಸಲು ಹಾಗೂ ಅಡಿಕೆ ಬೆಳೆಗಾರರು ಒಗ್ಗಟ್ಟಾಗಿ ಜಾಗೃತಗೊಂಡು ನಿರ್ಣಾಯಕ ಹೋರಾಟಕ್ಕೆ ಸಿದ್ಧರಾಗ ಬೇಕೆಂದು ದ.ಕ.ಜಿಲ್ಲಾ ರೈತಸಂಘದ ಅಧ್ಯಕ್ಷ ಕಾ. ಕೆ.ಆರ್.ಶ್ರೀಯಾನ್ ರವರು ವಿಟ್ಲದಲ್ಲಿ ಜನವರಿ 31 ರಂದು ನಡೆದ ಫಿಕರ್ನಾ ಅಡಿಕೆ ಬೆಳೆಗಾರರ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ತೀರಾ ಬೆಲೆ ಕುಸಿತ, ಕ್ಯಾಂಪ್ಕೊ ಮಾರ್ಕೆಟಿಂಗ್ ಸಂಸ್ಥೆ ವಿಫಲತೆ, ಸರ್ಕಾರದ ವಿಪರೀತ ತೆರಿಗೆ ಭಾರಿ ರೈತ ವಿರೋಧಿ ಧೋರಣೆಯಿಂದ ಕಂಗಾಲಾಗಿರುವ ರೈತರು ಸಂಘಟಿತರಾಗಿ ಐಕ್ಯ ಹೋರಾಟ ನಡೆಸಲು ಮುಂದಾಗಬೇಕೆಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಕಾ॥ವಾಸುಗಟ್ಟಿ,ಶಿವಣ್ಣ ಗೌಡ, ಲಕ್ಷ್ಮಣಮಾಸ್ತರ್, ಜಯರಾಮಶಾಸ್ತ್ರಿ ಯವರು ಕರೆ ನೀಡಿದರು.

ಅಡ್ವೊಕೇಟ್ ಶ್ರೀರಾಮಚಂದ್ರಗೌಡರವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಫೆಬ್ರವರಿ 10 ರಂದು ಮಂಗಲಿಕೂರಿನ ಪುರಭವನದಲ್ಲಿ ಜರುಗಲಿರುವ ಜಿಲ್ಲಾಮಟ್ಟದ ಅಡಿಕೆ ಬೆಳೆಗಾರರ ಸಮಾವೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ನಿರ್ಣಯ ಸ್ವೀಕರಿಸಿತು. ಕಾ॥ಎ.ರಾಮಣ್ಣನವರ ವಂದನಾರ್ಪಣೆಯೊಂದಿಗೆ ಸಮಾವೇಶ ಮುಕ್ತಾಯ ಕಗೊಂಡಿ. ●

ಹೆಡ್ ಕಾನ್‌ಸ್ಟೇಬಲ್ ಅಪಘಾತದಲ್ಲಿ ಸಾವು

ಜನವರಿ 16 ರಿಂದ 18 ರ ವರೆವಿಗೆ ಗುಲ್ಬರ್ಗಾದಲ್ಲಿ ಜರುಗಿದ ಎಸ್.ಎಫ್.ಐ. ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿ ಹಿಂತಿರುಗಿದ ಪ. ಬಂಗಾಳದ ಶಿಕ್ಷಣ ಮಂತ್ರಿ ಕಾ॥ ಕಾಂತಿ ಬಿಸ್ವಾಸ್‌ರವರನ್ನು ಹೈದರಾಬಾದ್‌ಗೆ ಬಿಟ್ಟು ಹಿಂತಿರುಗುತ್ತಿದ್ದ ಡಿ. ಎ. ಆರ್. ಪಿ. ಹೆಡ್ ಕಾನ್‌ಸ್ಟೇಬಲ್ ಮಾರ್ತಂಡಯ್ಯನವರು ಅಪಘಾತದಲ್ಲಿ ಆಕಸ್ಮಿಕ ಮರಣಕ್ಕೀಡಾಗಿದ್ದಾರೆ.

ಸಿ. ಪಿ. ಐ. (ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿ ಜನವರಿ 20 ರಂದು ಸಭೆ ಸೇರಿ ನಿಧನರಾದ ಮಾರ್ತಂಡಯ್ಯನವರಿಗೆ ಹೃದಯ ಪೂರ್ವಕ ಶ್ರದ್ಧಾಂಜಲಿ ಅರ್ಪಿಸಿತು. ಕಾ॥ ಕಾಂತಿ ಬಿಸ್ವಾಸ್‌ರ ಅಂಗರಕ್ಷಕರಾಗಿ ತೆರಳಿದ್ದ ಅವರ ಆಕಸ್ಮಿಕ ಮರಣ ಗುಲ್ಬರ್ಗಾ ಸಂಗಾತಿಗಳ ಮನಸ್ಸಿನಲ್ಲಿ ಆಘಾತವುಂಟು ಮಾಡಿದೆ ಎಂದು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಕಲ್ಲಪ್ಪ ಕಿರಣಗಿಯವರು ತಿಳಿಸಿದ್ದಾರೆ. ಮಾರ್ತಂಡಯ್ಯನವರ ಕುಟುಂಬಕ್ಕೆ ಸರ್ಕಾರ ಕೂಡಲೇ ಪರಿಹಾರ ಒದಗಿಸಲು ಒತ್ತಾಯಿಸಿದೆ.

ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿ ಹಾಗೂ ಸಮ್ಮೇಳನದ ಸ್ವಾಗತ ಸಮಿತಿಗಳು ಅತೀವ ದುಃಖ ವ್ಯಕ್ತಪಡಿಸಿ ಸಂತಾಪ ಸೂಚಿಸಿವೆ. ●

ಇಸ್ರೇಲೀ ದಮನಕ್ಕೆ ಮತ್ತೆ ಸಾಮ್ರಾಜ್ಯಶಾಹೀ ಬೆಂಬಲ

ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಅಲಿಪ್ತ ದೇಶಗಳು ಇಸ್ರೇಲ್ ಆಕ್ರಮಿತ ಗಾಝಾ ಪಟ್ಟಿ ಹಾಗೂ ಪಶ್ಚಿಮ ತಟದ ಪ್ರದೇಶಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯನ್ನು ನಿಲ್ಲಿಸಿ ನಾಲ್ಕನೇ ಜಿನೇವಾ ಸಮಾವೇಶದನ್ವಯ ರಕ್ಷಣೆ ನೀಡಬೇಕೆಂದು ಕರೆ ನೀಡುವ ನಿರ್ಣಯವನ್ನು ಫೆಬ್ರವರಿ 1ರ ಸಭೆಯಲ್ಲಿ ಮಂಡಿಸಿದವು. ಸಭೆ ಇದನ್ನು 14-1 ಮತಗಳಿಂದ ಅಂಗೀಕರಿಸಲು ನಿರ್ಧರಿಸಿದಾಗ ಅಮೇರಿಕಾ ಮತ್ತೊಮ್ಮೆ ತನ್ನ ವಿಟೋ ಅಧಿಕಾರ ಬಳಸಿ ಅದನ್ನು ನಿಷ್ಫಲಗೊಳಿಸಿದೆ. ವಾಸ್ತವವಾಗಿ ಅಮೇರಿಕಾ ಈ ವಿಟೋ ಅಧಿಕಾರ ಬಳಸದಂತೆ ಮಾಡಲೆಂದೇ ಕಳೆದ ಹಲವು ದಿನಗಳ ಸತತ ರಾಜೀ ಮಾತುಕತೆಗಳ ನಂತರ ನಿರ್ಣಯದ ದನಿಯನ್ನು ಬಹಳ ಮೆದುಗೊಳಿಸಲಾಗಿತ್ತು.

ಈ ನಡುವೆ ಕಳೆದ ಏಳುವಾರಗಳ ಇಸ್ರೇಲೀ ಕ್ರೂರ ದಮನದಲ್ಲಿ ಕನಿಷ್ಟ 41 ಪ್ಯಾಲೆಸ್ಟೀನಿಯನ್ನರು ಕೊಲ್ಲಲ್ಪಟ್ಟಿದ್ದಾರೆ. ಸಾವಿರಾರು ಮಂದಿ ಸೆರೆಯಾಗಿದ್ದಾರೆ. ಎಂದು ವರದಿಯಾಗಿದೆ. ಇಪ್ಪತ್ತು ವರ್ಷಗಳಿಂದ ಇಸ್ರೇಲೀ ಆಕ್ರಮಣಕ್ಕೊಳಗಾಗಿರುವ ಈ ಪ್ರದೇಶದಲ್ಲಿಪ್ಯಾಲೆಸ್ಟೀನಿಯನ್ನರಈ ಅಭೂತಪೂರ್ವ ಪ್ರತಿಭಟನೆಯನ್ನು ಅಡಗಿಸಲು ಇಸ್ರೇಲಿಗಳು ಸೈನಿಕ ತುಕಡಿಗಳಿಂದ ಹೆಲಿಕಾಪ್ಟರುಗಳಿಂದ, ಟ್ಯಾಂಕುಗಳಿಂದ ಅಮಾನುಷ ಹಲ್ಲೆ ಮಾಡುತ್ತಿರುವುದನ್ನು ಸಿಟ್ಟಿನಿಂದ ನೋಡುತ್ತಾ ಬಂದಿರುವ ವಿಶ್ವ ಜನಾಭಿಪ್ರಾಯ ಅಮೇರಿಕಾದ ಇತ್ತೀಚಿನ ವಿಟೋದಿಂದ ಮತ್ತಷ್ಟು ಕ್ರೋಧಗೊಂಡಿದೆ.

1967ರ ಪಶ್ಚಿಮ ಏಷ್ಯಾ ಯುದ್ಧದಲ್ಲಿ ಇಸ್ರೇಲ್ ಅರಬ್ಬರಿಂದ ಕಸಿದುಕೊಂಡ ಈ ಪ್ರದೇಶಗಳಲ್ಲಿ ಈ ಹಿಂದೆಯೂ ಹಲವು ಭಾರಿ ಪ್ಯಾಲೆಸ್ಟೀನಿಯನ್ನರ ತೀವ್ರ ಪ್ರತಿಭಟನೆಗಳು ಕಂಡುಬಂದಿದ್ದು ಇಸ್ರೇಲೀ ಸೇನೆ ಅವನ್ನು ದಮನ ಮಾಡುವಲ್ಲಿ ಯಶಸ್ವಿಯಾಗಿತ್ತು. ಆದರೆ ಈ ಬಾರಿಯಷ್ಟು ಪ್ರತಿರೋಧವನ್ನು ಅದು ಹಿಂದೆಂದೂ ಎದುರಿಸಬೇಕಾಗಿ ಬಂದಿರಲಿಲ್ಲ ಎಂದು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ. ಈ ಮತ ಪ್ರದರ್ಶನಗಳಲ್ಲಿ ಯುವ ಪ್ಯಾಲೆಸ್ಟೀನಿಯನ್ನರು ಅತ್ಯಂತ ದೃಢ ನಿರ್ಧಾರದಿಂದ ಹಾಗೂ ಕ್ರೋಧದಿಂದ ಭಾಗವಹಿಸುತ್ತಿರುವುದು ಗಮನಾರ್ಹ. ಇಸ್ರೇಲೀ ಆಕ್ರಮಿತ ಪ್ರದೇಶಗಳ ನಿರಾಶ್ರಿತ ಶಿಬಿರಗಳಲ್ಲೇ ಹುಟ್ಟಿ ಬೆಳೆದ, ಹಲವು ವಿಧದ ಕಿರುಕುಳ, ಅವಮಾನ ಹಾಗೂ ಸಂಕೋಲೆಗಳನ್ನು ನಿರಂತರವಾಗಿ ಎದುರಿಸುತ್ತಾ ಬಂದಿರುವ ಯುವ ಪ್ಯಾಲೆಸ್ಟೀನಿಯನ್ನರು ಆಕ್ರಮಣಕಾರರ ಆಳ್ವಿಕೆಯನ್ನು ವಿರೋಧಿಸುವ ದೃಢ ನಿರ್ಧಾರ ಮಾಡಿದಂತಿದೆ ಎಂದು ಈ ಪ್ರದೇಶಗಳಲ್ಲಿ ಮಾನವಾಧಿಕಾರಗಳ ಉಲ್ಲಂಘನೆಗಳ ತನಿಖೆ ನಡೆಸಿದ ವಿಶ್ವ ಸಂಸ್ಥೆಯ ವಿಶೇಷ ಸಮಿತಿಯ ಅಧ್ಯಕ್ಷರು ಅಭಿಪ್ರಾಯ ಪಟ್ಟಿದ್ದಾರೆ. ಇಸ್ರೇಲಿಗಳ ಯಾವ ದಮನವೂ ತಾಯ್ನಾಡೊಂದನ್ನು ಪಡೆದೇ ತೀರುವ ಈ ಯುವ ಪ್ಯಾಲೆಸ್ಟೀನಿಯನ್ನರ ದೃಢ ನಿರ್ಧಾರವನ್ನು ಮುರಿಯಲು ಶಕ್ತವಾಗಲಿಕ್ಕಿಲ್ಲ. ●

ಭೂಹೀನರ ಸಮಾವೇಶ

ಮಹಾರಾಷ್ಟ್ರ

ಕಳೆದ ಕೆಲವು ತಿಂಗಳುಗಳಿಂದ ಮಹಾರಾಷ್ಟ್ರದಲ್ಲಿ ಭೂಹೀನರ ಹಕ್ಕುಗಳನ್ನು ಸಾಧಿಸಲು ಭೂಮಿಗಾಗಿ ಹೋರಾಟ ತೀವ್ರವಾಗುತ್ತಿದೆ. ಇದರ ಫಲವಾಗಿ ಔರಂಗಾಬಾದ್‌ನಲ್ಲಿ ಇತ್ತೀಚೆಗೆ ರಾಜ್ಯ ಮಟ್ಟದ ಭೂಹೀನರ ಸಮಾವೇಶ ನಡೆಯಿತು. ಇದನ್ನು ಭೂಹೀನರ ಹಕ್ಕುಗಳ ರಕ್ಷಣಾ ಸಮಿತಿ ಏರ್ಪಡಿಸಿತ್ತು. ಈ ಸಮಿತಿಯಲ್ಲಿ ಸಿ.ಪಿ.ಐ.(ಎಂ) ಅಲ್ಲದೆ ಸಿ ಪಿ.ಐ,ಆರ್.ಪಿ.ಐ, (ಪ್ರಕಾಶ ಅಂಬೇಡ್ಕರಗುಂಪು) ಜನತಾ ಲಾಲ್ ನಿಶಾನ್ ಪಕ್ಷಗಳು ಭಾಗಿಯಾಗಿವೆ. ರಾಜ್ಯದ 30 ಜಿಲ್ಲೆಗಳಲ್ಲಿ 23 ಜಿಲ್ಲೆಗಳಿಂದ ಬಂದ 15000 ಭೂಹೀನರು ಸಮಾವೇಶದಲ್ಲಿ ಭಾಗವಹಿಸಿದ್ದರು

ಈ ಸಮಿತಿಯನ್ನುರಚಿಸಲು ಮುತುವರ್ಜಿ ವಹಿಸಿದ್ದು ಸಿ.ಪಿ.ಐ.[ಎಂ] ರಾಜ್ಯ ಕಾರ್ಯದರ್ಶಿ ಪ್ರಭಾಕರ ಸಾಂಝುಗಿರಿ ಮತ್ತು ಆರ್.ಪಿ.ಐ. ನಾಯಕ ಪ್ರಕಾಶ ಅಂಬೇಡ್ಕರ ಇವರ ನಾಯಕತ್ವದ ಗುಂಪು ಇತರ ಆರ್.ಪಿ.ಐ. ಗುಂಪುಗಳಂತೆ ಕಾಂಗ್ರೆಸ್ ಬಾಲಬಡುಕ ಅಲ್ಲ ಮಾತ್ರವಲ್ಲ. ಭೂಹೀನರ ಸಮಸ್ಯೆಗಳನ್ನು ತೆಗೆದುಕೊಂಡು ಕೆಲವು ಜಿಲ್ಲೆಗಳಲ್ಲಿ ಹೋರಾಟ ನಡೆಸುತ್ತಿತ್ತು. ಸೆಪ್ಟೆಂಬರ್ ಚಳುವಳಿಯಲ್ಲಿ ಸಹ ಹಲವು ರೈತ ಸಂಘಟನೆಗಳು ಭಾಗವಹಿಸಿದ್ದವು ಈ ಜಂಟಿ ಹೋರಾಟಗಳ ಹಿನ್ನೆಲೆಯಲ್ಲಿ ಈ ಸಮಾವೇಶ ನಡೆಯಿತು. ಖಾಲಿ ಇರುವ ಸರ್ಕಾರಿ ಮತ್ತು ಅರಣ್ಯ ಜಮೀನುಗಳನ್ನು ಭೂಹೀನರ ನಡುವೆ ಹಂಚಬೇಕೆಂದು ಸಮಾವೇಶ ಅಂಗೀಕರಿಸಿದ ಮುಖ್ಯ ನಿರ್ಣಯವಾಗಿತ್ತು. ಇದಲ್ಲದೆ ಇಂತಹ ಭೂಮಿಯನ್ನು ವಶಪಡಿಸಿಕೊಂಡು ಸಾಗುವಳಿ ಮಾಡುತ್ತಿರುವವರ ಹಕ್ಕನ್ನು ಸಕ್ರಮಗೊಳಿಸಬೇಕೆಂದು ಇನ್ನೊಂದು ಪ್ರಮುಖ ನಿರ್ಣಯವಾಗಿತ್ತು. ಈ ಬೇಡಿಕೆಗಳಿಗೆ ಒತ್ತಾಯಿಸಿ ಸಾವಿರಾರು ಭೂಹೀನರ ಭಾರೀ ಪ್ರದರ್ಶನವನ್ನು ಮುಂಬಯಿಯ ರಾಜ್ಯ ವಿಧಾನಸಭೆಯ ಮುಂದೆ ಮಾರ್ಚ್ 29 ರಂದು ನಡೆಸಬೇಕೆಂಬ ಕರೆಯೊಂದಿಗೆ ಸಮಾವೇಶ ಮುಕ್ತಾಯವಾಯಿತು.

ಕೋಮು ಸೌಹಾರ್ದತೆ, ಶಾಂತಿಯ ಬೀಡು

ಪಶ್ಚಿಮಬಂಗಾಳ

ದೇಶದಲ್ಲೆಲ್ಲಾ ಹೆಚ್ಚಿನ ರಾಜ್ಯಗಳಲ್ಲಿ ಕೋಮು ಜ್ವಾಲೆ ಹತ್ತಿಉರಿಯುತ್ತಿರುವಾಗ, ಪಶ್ಚಿಮಬಂಗಾಳ ರಾಜ್ಯ ಕೋಮು ಸೌಹಾರ್ದತೆ ಶಾಂತಿಯ ಬೀಡಾಗಿದೆ. ರಾಜ್ಯದ ಆರರಲ್ಲಿ ಒಂದು ಭಾಗ ಮುಸ್ಲಿಂ ಜನ ಸಂಖ್ಯೆ ಇದ್ದರೂ, ಕೋಮುಗಲಭೆಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಇವೆ. ದೇಶದ ವಿಭಜನೆಯ ಕಾಲದಲ್ಲಿ ಬಂಗಾಳ ಭಾರಿ ಕೋಮುಗಲಭೆಗಳ ಕೇಂದ್ರವಾಗಿತ್ತು. ಈ ಸಂದರ್ಭದಲ್ಲಿನೆನಪಿನಲ್ಲಿಟ್ಟುಕೊಳ್ಳಬೇಕು. ವಿಭಜನೆಯ ಕಾಲದಲ್ಲಿ ಹೆಚ್ಚಿನ ಸ್ಥಿತಿವಂತ ಮುಸ್ಲಿಮರು (ಆಗಿನ) ಪೂರ್ವ ಪಾಕಿಸ್ತಾನಕ್ಕೆ ಹೊರಟು ಹೋದರು. ಭಾರತದಲ್ಲಿ ಉಳಿಯಲು ನಿರ್ಧರಿಸಿದಮುಸ್ಲಿಮರುಹೆಚ್ಚಾಗಿ ಬಡವರು ಕೈಗಾರಿಕಾ ಕಾರ್ಮಿಕರು, ಸಣ್ಣ ಅಂಗಡಿಕಾರರು, ದರ್ಜಿಗಳು, ಹೋಟೇಲು ಕಾರ್ಮಿಕರು, ಕಸಬುದಾರರು, ಇತ್ಯಾದಿ ವಿಭಜನೆಯ ನಂತರದ ಕಾಂಗ್ರೆಸ್ ಸರಕಾರಗಳಡಿಯಲ್ಲಿ ಇವರ ಜೀವನ ದುರ್ಭರವಾಗಿತ್ತು. ಇವರು ದಬ್ಬಾಳಿಕೆಗೊಳಗಾದ ಅಲ್ಪ ಸಂಖ್ಯಾತರಾಗಿದ್ದರು.ಆಗಾಗ ಕೋಮು ಗಲಭೆಗಳು ನಡೆದು ಅವರಲ್ಲಿ ಭಯ ಹುಟ್ಟಿಸುತ್ತಿದ್ದವು 1964ರಲ್ಲಿ ಭಾರಿ ಕೋಮು ಗಲಭೆಗಳು ನಡೆದವು ಆದರೆ ಅದೇ ಕೊನೆಯ ದೊಡ್ಡ ಗಲಭೆಯಾಗಿತ್ತು. ಆಗ ಬಲಗೊಳ್ಳುತ್ತಿದ್ದ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ಮುಸ್ಲಿಮರ ಸಮಸ್ಯೆಗಳನ್ನು ಎತ್ತಿಕೊಂಡಿತು.

1967ರಲ್ಲಿ ಸಂಯುಕ್ತ ರಂಗ ಸರ್ಕಾರ ಬರುವ ಮೊದಲು ಮುಸ್ಲಿಮರು ತಮ್ಮ ಭೂಮಿ ಮಾರಬೇಕಾದರೆ ತಾವು ಭಾರತದ ಪ್ರಜೆಎಂಬ ಕೋರ್ಟ್ ಸರ್ಟಿಫಿಕೇಟ್ ತರಬೇಕು ಎನ್ನುವ ಮಲತಾಯಿ ಧೋರಣೆ ಜಾರಿಯಲ್ಲಿತ್ತು. ಸಂಯುಕ್ತ ರಂಗ ಈ ನೀತಿಯನ್ನು ಕಿತ್ತುಹಾಕಿತು. ಪ್ರಜಾಸತ್ತಾತ್ಮಕ ಪ್ರಜ್ಞೆ ಹೆಚ್ಚಿದಂತೆ ಕೋಮುವಾದಿ ಶಕ್ತಿಗಳಿಗೆ ತಲೆಎತ್ತಲು ಸಾಧ್ಯವಾಗಲಿಲ್ಲ ಸಿ.ಪಿ.ಐ.(ಎಂ) ಮತ್ತಿತರ ಎಡ ಕಾರ್ಯಕರ್ತರ ಎಚ್ಚರಿಕೆಯ ಮುಂಜಾಗರೂಕತೆಯಿಂದಾಗಿ 1972-77ರ ಅರೆ ಫ್ಯಾಸಿಸ್ಟ ದಬ್ಬಾಳಿಕೆಯಲ್ಲೂ ಕೋಮುಗಲಭೆಗಳು ನಡೆಯಲಿಲ್ಲ.

1977ರಲ್ಲಿ ಎಡರಂಗ ಅಧಿಕಾರಕ್ಕೆ ಬಂದಾಗಿನಿಂದಂತೂ ಕೋಮು ಪರಿಸ್ಥಿತಿ ಸಂಪೂರ್ಣ ಸಾಮಾನ್ಯವಾಗಿದೆ. ಕಳೆದ ಚುನಾವಣೆಗಳಲ್ಲಿ ಶರೀಯತ್, ಶಹಾಬಾನು ಪ್ರಕರಣ ಇತ್ಯಾದಿಗಳ ಹೆಸರಿನಲ್ಲಿ ಮುಸ್ಲಿಮರನ್ನು ಧರ್ಮದ ಹೆಸರಿನಲ್ಲಿ ಪ್ರತ್ಯೇಕಿಸಲು ಕಾಂಗ್ರೆ ಮತ್ತು ಮುಸ್ಲಿಂ ಮೂಲಭೂತವಾದಿಗಳು ಪ್ರಯತ್ನ ಪಟ್ಟರೂ ಇದಕ್ಕೆ ಹೆಚ್ಚಿನ ಯಶಸ್ಸು ಸಿಗಲಿಲ್ಲ. ಆದರೆ ಈ ಬಗ್ಗೆ ಎಚ್ಚರಿಕೆ ಈಗಿನ ಪರಿಸ್ಥಿತಿಯಲ್ಲಿ ಅತ್ಯಗತ್ಯ. ●

ಸಂಕ್ಷಿಪ್ತ ಸುದ್ದಿಗಳು

ಅಮೇರಿಕದಲ್ಲಿ ಜೀವನ ಮಟ್ಟ ಕುಸಿತ

★ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಾರ್ವಜನಿಕ ಲೆಕ್ಕ ಪತ್ರ ಕಚೇರಿಯ ಇತ್ತೀಚಿನ ವರದಿಯ ಪ್ರಕಾರ 1988ರ ಅಂತ್ಯದ ಹೊತ್ತಿಗೆ 80 ಶೇಕಡಾ ಅಮೇರಿಕನ್ನರ ನಿಜ ಆದಾಯ ಒಂದು ದಶಕದ ಹಿಂದೆ ಇದ್ದುದಕ್ಕಿಂತಲೂ ಕಡಿಮೆಯಾಗಲಿದೆ, ಆದರೆ 5 ಶೇಕಡಾದಷ್ಟು ಸಿರಿವಂತ ಅಮೇರಿಕನ್ನರ ಆದಾಯ 23% ರಷ್ಟು ಹೆಚ್ಚಲಿದೆ ! ರೀಗನ್‌ರ ಆರ್ಥಿಕ ಧೋರಣೆಗಳು ದೇಶವನ್ನು ಹೇಗೆ ಇಬ್ಭಾಗ ಮಾಡಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಹೇಳಲಾಗುತ್ತಿದೆ.

ನಮೀಬಿಯಾ ಹೋರಾಟಗಾರರ ಪ್ರತಿರೋಧ

★ ನಮೀಬಿಯಾವನ್ನು ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿರುವ ವರ್ಣದ್ವೇಷೀ ದಕ್ಷಿಣ ಆಫ್ರಿಕಾದ ಸೇನೆಯ ಅತ್ಯಂತ ದೊಡ್ಡ ಮಿಲಿಟರಿ ನೆಲೆಯಾದ ಒಶಾಕಾಟಿಯ ಮೇಲೆ ಜನವರಿ 13 ರಂದು ಸ್ವಾಪೋ ಗೆರಿಲ್ಲಾಗಳು ಒಂದು ಅತ್ಯಂತ ಧೀರ ದಾಳಿ ನಡೆಸಿ ವರ್ಣದ್ವೇಷೀ ಸೇನೆಯನ್ನು ನಡುಗಿಸಿ ಬಿಟ್ಟಿದ್ದಾರೆ. ದಕ್ಷಿಣ ಆಫ್ರಿಕಾ ನಮೀಬಿಯಾದ ಮೇಲೆ ತನ್ನ ವಸಾಹತುಶಾಹೀ ಹತೋಟಿಯನ್ನು ಕೊನೆಗೊಳಿಸದಿದ್ದರೆ 1988ರಲ್ಲಿ ವಿಮೋಚನಾ ಹೋರಾಟ ವ್ಯಾಪಕಗೊಳ್ಳಲಿದೆ ಎಂಬ ಮುನ್ನೆಚ್ಚರಿಕೆಯಿದು ಎಂದು ಸ್ವಾಪೋ ವಕ್ತಾರರು ಹೇಳಿದ್ದಾರೆ.

'ವಿಶ್ವಬ್ಯಾಂಕ್ ಅಮೇರಿಕಾ ಪಕ್ಷಪಾತಿ'

★ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಒಬ್ಬ ಪ್ರಸಿದ್ಧ ಆರ್ಥಿಕ ತಜ್ಞರಾದ ಪರ್ಸಿ ಮಿಸ್ತ್ರಿಯವರು ವಿಶ್ವಬ್ಯಾಂಕ್ ಮತ್ತಿತರ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಅಮೇರಿಕನ್ ಹಿತಾಸಕ್ತಿಗಳನ್ನಷ್ಟೇ ಪ್ರತಿನಿಧಿಸುತ್ತವೆ ಎಂದು ತೀವ್ರವಾಗಿ ಖಂಡಿಸಿದ್ದಾರೆ. ಹಿಂದೆ ವಿಶ್ವಬ್ಯಾಂಕ್‌ನ ಹಿರಿಯ ಅಧಿಕಾರಿಯಾಗಿದ್ದ ಇವರು ಲ್ಯಾಟಿನ್ ಅಮೇರಿಕಾ ದೇಶಗಳ ಸಾಲದ ಸಮಸ್ಯೆ ಪರಿಹಾರಕ್ಕೆ ನೀಡಿದ ಶಿಫಾರಸುಗಳನ್ನು ಅಮೇರಿಕಾ ನಿಷ್ಫಲಗೊಳಿಸಿದುದನ್ನು ಪ್ರತಿಭಟಿಸಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಹೊರ ಬಂದಿದ್ದರು.

ಹುತಾತ್ಮರ ಸಾಲಿಗೆ ಇನ್ನಿಬ್ಬರು ಸಂಗಾತಿಗಳು

ಪಂಜಾಬಿನಲ್ಲಿ ಸಿ.ಪಿ.ಐ.(ಎಂ) ಸಂಗಾತಿಗಳು ಖಲಿಸ್ತಾನ ಭಯೋತ್ಪಾದಕರ ಗುಂಡುಗಳನ್ನೆದುರಿಸಿ, ದೇಶದ ಭಾವೈಕ್ಯತೆಗಾಗಿ ಹೋರಾಡುತ್ತಿದ್ದಾರೆ. ಈಗಾಗಲೇ ಹಲವಾರು ಪಕ್ಷದ ಸಂಗಾತಿಗಳು ಹುತಾತ್ಮರಾಗಿದ್ದಾರೆ. ಡಿಸೆಂಬರ್ 26ರಂದು ಇನ್ನಿಬ್ಬರು ಸಂಗಾತಿಗಳು ಈ ಸಾಲಿಗೆ ಸೇರಿದ್ದಾರೆ. ಅವರು ಅಮೃತಸರ ಜಿಲ್ಲೆಯ ಭಟ್ಟಿಕೆ ಹಳ್ಳಿಯ ಕಾ|| ಕಾಶ್ಮೀರ್ ಸಿಂಗ್ ಮತ್ತು ಕಾ|| ಸರಂಜೀತ್ ಸಿಂಗ್ ಇವರಿಬ್ಬರನ್ನು ಡಿಸೆಂಬರ್ 26ರಂದು ಖಲಿಸ್ತಾನಿ ಕೊಲೆ ಗಡುಕರು ಗುಂಡಿಕ್ಕಿ ಕೊಂದಿದ್ದಾರೆ.

ಇತ್ತೀಚೆಗೆ ಸಿ.ಪಿ.ಐ.(ಎಂ) ಸಿ.ಪಿ.ಐ. ರಾಜ್ಯ ನಾಯಕರು ಎರಡೂ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳೂ ಸೇರಿ ಪಂಜಾಬ್ ಸಮಸ್ಯೆಯ ಪರಿಹಾರಕ್ಕಾಗಿ ಜನವರಿ 30ರ "ಪ್ರತಿಜ್ಞಾ ದಿನ"ದಿಂದ ಆರಂಭಿಸಿ ಜಂಟಿ ಪ್ರಚಾರ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ.

ಭೂಸುಧಾರಣಾ ಶಾಸನದ ತಿದ್ದುಪಡಿ ರದ್ದು ಪಡಿಸಲು ಒತ್ತಾಯ

ಭೂಸುಧಾರಣಾ ಜ್ಯಾರಿಯಲ್ಲಿ ಅತ್ಯಂತ ಶೋಚನೀಯ ದಾಖಲೆ ಹೊಂದಿರುವ ಒರಿಸ್ಸಾ ರಾಜ್ಯದಲ್ಲಿ ನಡೆದ ಅಲ್ಪ-ಸ್ವಲ್ಪ ಸುಧಾರಣೆಯನ್ನು ನಿರಾಕರಿಸುವ ಯತ್ನ ನಡೆದಿದೆ.ಇತ್ತೀಚೆಗೆ ಅಲ್ಲಿನ ಹೈಕೋರ್ಟ್ ಎಪ್ಪತ್ತರ ದಶಕದ ಆರಂಭದಲ್ಲಿ ಭೂವಿತರಣೆಯ ಮೂಲಕ ಸುಮಾರು ನಲ್ವತ್ತು ಭೂಹೀನ ಕುಟುಂಬಗಳು ಪಡೆದ ಜಮೀನಿನಿಂದ ಅವರನ್ನು ಒಕ್ಕಲೆಬ್ಬಿಸಬೇಕೆಂದು ಆದೇಶ ನೀಡಿದೆ. 1980ರಲ್ಲಿ ಜನತಾ ಆಳ್ವಿಕೆಯ ಕಾಲದಲ್ಲಿ ಭೂಸುಧಾರಣಾ ಶಾಸನಕ್ಕೆ ತಂದ ರೈತ-ವಿರೋಧೀ ತಿದ್ದುಪಡಿಯ ಪ್ರಕಾರ ಹೈಕೋರ್ಟ್ ಈ ಆದೇಶ ನೀಡಿದೆ. 1980ರಿಂದ ಕಿಸಾನ್ ಸಭಾ ಇದನ್ನು ವಿರೋಧಿಸುತ್ತಾ ಬಂದಿದ್ದರು ಇದುವರೆಗೂ ಈ ತಿದ್ದುಪಡಿಯನ್ನು ರದ್ದುಪಡಿಸಿರಲಿಲ್ಲ. ಈಗ ಭೂಹೀನರನ್ನು ಒಕ್ಕಲೆಬ್ಬಿಸುವುದನ್ನು ಪ್ರತಿಭಟಿಸಲು ಹಾಗೂ ಈ ತಿದ್ದುಪಡಿಯನ್ನು ರದ್ದುಪಡಿಸುವಂತೆ ಒತ್ತಾಯ ಪಡಿಸಲು ರಾಜ್ಯ ಕಿಸಾನ್ ಸಭಾ ಘಟಕ ನಿರ್ಧರಿಸಿದೆ.

ಎ. ಐ. ಡಿ. ಡಬ್ಲ್ಯು. ಎ. ರಾಜ್ಯಮಟ್ಟದ ಸಭೆ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯರಾಜ್ಯ ಮಟ್ಟದ ಸಭೆಯೊಂದನ್ನು ಫೆಬ್ರವರಿ 7 ರಂದು ಬೆಂಗಳೂರಿನಲ್ಲಿ ನಡೆಸಲಾಗುತ್ತಿದೆ. ಈ ಸಭೆಯಲ್ಲಿ ಅಖಿಲಭಾರತ ಎ.ಐ.ಡಿ ಡಬ್ಲ್ಯೂ.ಎ.ನ ಪ್ರಧಾನ ಕಾರ್ಯದರ್ಶಿಯವರಾದ ಕಾ||ಸುಶೀಲಗೋಪಾಲನ್ ರವರು ಹಾಗೂ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯೆ ಕಾ||ಶ್ರೀಮತಿಹರಿಣಿ ಕಕ್ಕೇರಿಯವರು ಭಾಗವಹಿಸಲಿದ್ದಾರೆ. ಸಭೆಯು ಫೆಬ್ರವರಿ 7 ರಂದು ಬೆಳ್ಳಿಗೆ 10 ಗಂಟೆಗೆ ವಿಧಾನಸೌಧದ ಬಳಿ ಇರುವ ಕಬ್ಬನ್‌ಪಾರ್ಕ್‌ನ ಎನ್.ಜಿ.ಓ. ಸಂಭಾಗಣದಲ್ಲಿ ನಡೆಯುತ್ತದೆ. ಈ ಸಭೆಯನ್ನು ಯಶಸ್ವಿಗೊಳಿಸಲು ಬೆಂಗಳೂರಿನಲ್ಲಿ ಸಿದ್ಧತಾ ಸಮಿತಿಯೊಂದನ್ನು ರಚಿಸಲಾಗಿದೆ. ●

KRNW/BGS -312 MAG (2) PRB DECR 319/ - 78 79

ಅಡಿಕೆ ಬೆಲೆ ಕುಸಿತ : ಹೊಣೆ ಯಾರು ?

ಕೆ. ಆರ್. ಶ್ರೀ ಯಾನ್

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಮಂಗಳೂರು ತಾಲೋಕುಗಳು ಮತ್ತು ಕೇರಳ ರಾಜ್ಯದ ಕಾಸರಗೋಡು ತಾಲೂಕು ಅಲ್ಲದೆ ಕರ್ನಾಟಕ ರಾಜ್ಯದ ಉತ್ತರ ಕನ್ನಡ ಶಿವಮೊಗ್ಗ ಜಿಲ್ಲೆಯ ಕೆಲವು ತಾಲೂಕುಗಳು ಅಡಿಕೆ ಬೆಳೆಯುವ ಪ್ರದೇಶಗಳಾಗಿವೆ. ಅಡಿಕೆಯು ವಾಣಿಜ್ಯ ಬೆಳೆಯಾಗಿದ್ದು ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಮೊತ್ತದ ತೆರಿಗೆ ತುಂಬಿಸುವ ಬೆಳೆಯಾಗಿದೆ.

ಈ ಎಲ್ಲಾ ಪ್ರದೇಶದಲ್ಲಿ ಜನಸಾಮಾನ್ಯರ ಜೀವನಾಧಾರವಾದ ಅಡಿಕೆಯ ಬೆಲೆ ಇಂದು ತೀವ್ರವಾಗಿ ಕುಸಿದಿದೆ. ಇದೇರೀತಿ 1972ರಲ್ಲೂ ಅಡಿಕೆ ಬೆಲೆ ಕುಸಿತದಿಂದಾಗಿ ಇದೇ ರೀತಿಯ ಸಂಕಷ್ಟಕ್ಕೆ ರೈತರು ಬಲಿಯಾಗಿದ್ದರು. ಆ ಪರಿಸ್ಥಿತಿಯಲ್ಲಿ ರೈತರ ರಕ್ಷಣೆಗೆಂದು 1974ರಲ್ಲಿ ಸಹಕಾರಿಸಂಸ್ಥೆ ಕ್ಯಾಂಪ್ಕೊ ಸ್ಥಾಪನೆಯಾಯಿತು. ಆಬಳಿಕ ಅಡಿಕೆ ಖರೀದಿಸುವ, ಮಾರ್ಕೆಟಿಂಗ್ ನೋಡುವ ಕಾರ್ಯವನ್ನು 'ಕ್ಯಾಂಪ್ಕೊ' ಜಾಗ್ರತೆಯಿಂದ ನಡೆಸಲು ಆರಂಭಿಸುವುದರಿಂದ ಅಡಿಕೆ ಧಾರಣೆಯಲ್ಲಿ ಏರಿಕೆಯಾಗುತ್ತಾ ಬಂದು ರೈತ ಸ್ವಲ್ಪನಿಟ್ಟುಸಿರು ಬಿಡುವಂತಾಯಿತು. ಅಡಿಕೆ ಧಾರಣೆಯ ಏರಿಕೆ ಹಾಗೂ ಸ್ಥಿರತೆಯನ್ನು ಕಂಡ ಬೆಳೆಗಾರರು ಅನೇಕ ಮಂದಿ ಹೆಚ್ಚು ಹಣ ಹೂಡಿ ಆಧುನಿಕ ರೀತಿಯ ಕೃಷಿ ಉತ್ಪಾದನೆಗೂ ತೊಡಗಿ ತೋಟಕ್ಕೆ ನೀರು ಹಾಯಿಸಲು ಪಂಪ್ ಸೆಟ್, ತುಂತುರು ನೀರಾವರಿ ಮತ್ತು ರಸಗೊಬ್ಬರಗಳನ್ನು ಉಪಯೋಗಿಸಲು ಆರಂಭಿಸಿದರು.

ಆದರೆ ಕಳೆದ ಎರಡು ವರ್ಷಗಳಿಂದ ಇದ್ದ ಅಡಿಕೆಬೆಲೆ ಕುಸಿಯುತ್ತಾ ಬಂದು ಕೆ.ಜಿ.ಗೆ ರೂ. 20 ರಿಂದ 30 ರವರೆಗಿದ್ದ ದರ ರೂ. 12-00ರಿಂದ 7-00 ರೂಪಾಯಿಗೆ ಇಳಿದಿದೆ. ತಮ್ಮ ರಕ್ಷಕನೆಂದು ಘೋಷಿಸಿ ಬೆಳೆಸಿದ 'ಕ್ಯಾಂಪ್ಕೊ' ಸಂಸ್ಥೆಯಿಂದೂ ರೈತರಿಗೆ ರಕ್ಷಣೆ ಇಲ್ಲದಂತಾಗಿಕಂಗಾಲಾಗಿದ್ದಾರೆ.

ಗೊಬ್ಬರ, ಕ್ರಿಮಿನಾಶಕ ವಸ್ತುಗಳು, ಪಂಪ್ ಸೆಟ್ ಮೊದಲಾದ ವಸ್ತುಗಳನ್ನು ದುಬಾರಿ ಬೆಲೆಗೆಪಡೆದು, ಪ್ರಕೃತಿ ವಿಕೋಪದಿಂದ ಕಷ್ಟದಲ್ಲಿ ಉಳಿಸಿ ಬೆಳೆಸಿದ ಬೆಳೆಗೆ ಒಂದೇ ಸಮನೇ ದರ ಕುಸಿಯುತ್ತಾ ಬಂದುದರಿಂದ ರೈತರು ಮಾಡಿದ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಸಾಲವನ್ನೂ ಮರುಪಾವತಿ ಮಾಡುವ ಸ್ಥಿತಿಯಲ್ಲಿ ಈ ಬೆಳೆಗಾರರಿಲ್ಲ. ದ.ಕ. ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆ ವ್ಯವಹಾರವನ್ನು ಹೊಂದಿರುವ ಮಾರುಕಟ್ಟೆಗಳು ಸಹ ಇಂದು ತೀರಾ ಗಂಭೀರವಾದ ಆರ್ಥಿಕ ಮುಗ್ಗಟ್ಟನಲ್ಲಿ ಸಿಲುಕಿಕೊಂಡಿವೆ. ಇದರಿಂದಾಗಿ ಜಿಲ್ಲೆಯ ಇಡೀ ಆರ್ಥಿಕ ವ್ಯವಸ್ಥೆಯು ಕುಸಿದಂತಾಗಿದೆ.

ಅಡಿಕೆ ಬೆಳೆಗಾರರನ್ನು ರಕ್ಷಿಸಲು "ಕ್ಯಾಂಪ್ಕೊ" ವಿಫಲವಾಗಿರುವುದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಇಂದುಅಡಿಕೆ ಬೆಳೆಗಾರರನ್ನು ಮತ್ತು ಅದನ್ನೇನಂಬಿರುವ ಸಾವಿರಾರು ಕೃಷಿ ಕೂಲಿಗಾರರನ್ನು ಸಂಕಷ್ಟದಿಂದ ಪಾರುಮಾಡಲು ಯಾವ ಗಂಭೀರ ಪ್ರಯತ್ನವನ್ನು ಮಾಡಲಿಲ್ಲ. ಮಾತ್ರವಲ್ಲ ಕೇಂದ್ರ ಸರ್ಕಾರ ರೈತರಿಗೆ ಬೆಂಬಲದ ಬೆಲೆ ನೀಡದೆ ಅವರು ಉಪಯೋಗಿಸುವ ಕೃಷಿ ಸಲಕರಣೆ, ಗೊಬ್ಬರ ಕ್ರಿಮಿನಾಶಕ ವಸ್ತುಗಳ ಬೆಲೆಯನ್ನು ದುಬಾರಿ ಏರಿಸಲು ಆದರೆ ಉತ್ಪಾದಕರಿಗೆ ಅವಕಾಶ ನೀಡಿ, ಹಲವಾರು ಬಗೆಯ ತೆರಿಗೆಗಳನ್ನು ಹೇರಿ ಅಡಿಕೆ ವಹಿವಾಟಿಗೆ ಮಾರಕವಾದ ನೀತಿಯನ್ನು ಅನುಸರಿಸುತ್ತಿದೆ.

ಬೆಳೆಗಾರರ ಸಂಕಷ್ಟಗಳಬಗ್ಗೆ ಗಂಭೀರ ಗಮನಹರಿಸಿ ಕೇಂದ್ರ-ರಾಜ್ಯ ಸರಕಾರಗಳು ಮಾರುಕಟ್ಟೆಯನ್ನು ತಮ್ಮ ಅಂಕೆಗೆ ತಂದು ರೈತರ ಬೆಳೆಗಳನ್ನು ಬೆಂಬಲ ಬೆಲೆಗೆ ಖರೀದಿಸಬೇಕು, ಕನಿಷ್ಟ ಬೆಲೆ ನಿಗದಿಪಡಿಸಬೇಕು ಅಡಿಕೆ ಬೆಳೆಯುವ ವಿವಿಧ ರಾಜ್ಯಗಳಲ್ಲಿ ಮುಖ್ಯವಾಗಿ ಅಸ್ಸಾಂ, ಕೇರಳ, ಕರ್ನಾಟಕ ರಾಜ್ಯಗಳಲ್ಲಿ ಮಾರಾಟ ತೆರಿಗೆಯನ್ನು ಕಡಿತ ಮಾಡಿ ಏಕ ರೀತಿಯ ತೆರಿಗೆನೀತಿಯನ್ನು ಅನುಸರಿಸಬೇಕು, ತೆರಿಗೆವಂಚಿಸಿ ವ್ಯವಹಾರ ಮಾಡಲು ಅವಕಾಶವಿರದಂತೆ ಈಗಿನ ತೆರಿಗೆ ವಿಧಾನವನ್ನು ಪರಿಷ್ಕರಿಸಬೇಕು. ಅಡಿಕೆ ಬೆಳೆಗಾರರ ಸಹಕಾರಿ ಸಂಸ್ಥೆಗಳಿಗೆ ತೆರಿಗೆ ವಿನಾಯತಿ ಮತ್ತು ಸಾಕಷ್ಟು ಬಂಡವಾಳದ ಪೂರೈಕೆಯಾಗಬೇಕು. ಬೆಳೆ ಸಾಲಗಳನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಬೇಕು ಹಾಗೂ ಹೊಸ ಸಾಲಗಳನ್ನು ನೀಡಬೇಕು. ಅಡಿಕೆಯನ್ನು ವಿದೇಶಗಳಿಗೆ ರಫ್ತು ಮಾಡುವ ಬಗ್ಗೆ ಕೇಂದ್ರ ಸರಕಾರವು ಗಂಭೀರ ಪ್ರಯತ್ನ ಮಾಡಬೇಕು ಮತ್ತು ಅಡಿಕೆಯಿಂದ ಇತರ ಉಪಯೋಗ ವಸ್ತುಗಳನ್ನು ತಯಾರಿಸುವ ಬಗ್ಗೆ ಸಂಶೋಧನೆ ನಡೆಸುವ ಯೋಜನೆ ಹಾಕಬೇಕು.

ಈಗಿರುವ 'ಕ್ಯಾಂಪ್ಕೊ'ಸಂಸ್ಥೆ ಗಂಭೀರವಾಗಿ ರೈತರಿಂದ ಅಡಿಕೆ ಖರೀದಿಸುವ ಮತ್ತು ಮಾರಾಟ ಮಾಡುವ ಕಾರ್ಯವನ್ನು ತ್ವರಿತಗೊಳಿಸಿ ದೇಶದಾದ್ಯಂತ ಮಾರ್ಕೆಟನ್ನು ವಿಸ್ತರಿಸಬೇಕು. ಈ ಎಲ್ಲಾ ಸಮಸ್ಯೆಗಳಬಗ್ಗೆ ಕೇಂದ್ರ-ರಾಜ್ಯ ಸರಕಾರಗಳನ್ನು ಅಡಿಕೆ ಬೆಳೆಗಾರರು ಸಂಘಟಿತರಾಗಿ ಒತ್ತಾಯಿಸಲು ಸ್ವರ ಎಬ್ಬಿಸಬೇಕಾಗಿದೆ.

ಅಡಿಕೆ ಬೆಳೆಗಾರರ ದ.ಕ.ಜಿಲ್ಲಾ ಸಮ್ಮೇಳನ ಫೆ. 10 ರಂದು ನಡೆಸಲಾಗುತ್ತಿದೆ.

ಕಾ|| ಎನ್. ಎಲ್. ಉಪಾಧ್ಯಾಯರು ಆಸ್ಪತ್ರೆಗೆ

ಸಿ.ಪಿ.ಐ.(ಎಂ) ರಾಜ್ಯ ಸಮಿತಿಯ ಸೆಕ್ರೆಟೇರಿಯೇಟ್ ಸದಸ್ಯರೂ, ಹಿರಿಯ ಮುಖಂಡರು ಆದ ಕಾ|ಎನ್.ಎಲ್.ಉಪಾಧ್ಯಾಯರು ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮೂತ್ರಪಿಂಡ ದೋಷಕ್ಕಾಗಿ ಶುಶ್ರೂಷೆ ಪಡೆಯುತ್ತಿದ್ದಾರೆ. ಕಳೆದ 15 ದಿವಸಗಳಲ್ಲಿ ಎರಡು ಸಲ ಅವರ ಪರಿಸ್ಥಿತಿ ಗಂಭೀರವಾಗಿತ್ತು. ಆರು ಸಲ ಅವರಿಗೆ ಡಯಾಲಿಸಿಸ್ ಪ್ರಯೋಗಿಸಲಾಯಿತು. ಅವರು ಈಗ ಸ್ವಲ್ಪ ಚೇತರಿಸಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರನ್ನೊಳಗೊಂಡು ಪಕ್ಷದ ಸದಸ್ಯರೂ, ಹಿತೈಷಿಗಳೆಲ್ಲ ಭೇಟಿಯಾಗಿ, ಅವರು ತೀವ್ರ ಸುಧಾರಿಸಲೆಂದು ಹಾರೈಸುತ್ತಿದ್ದಾರೆ.

(1ನೇ ಪುಟದಿಂದ)

ಮಂತ್ರಿಗಳ ಸಭೆ ಕರೆದು ಕೇಂದ್ರ ಸರಕಾರದ ಮೇಲೆ ಒತ್ತಡ ತರಲು ಪ್ರಯತ್ನಿಸಿದ್ದವು. ಆದರೆ ರಾಮಕೃಷ್ಣ ಹೆಗ್ಗಡೆ, ಎನ್. ಟಿ. ಆರ್. ಮೊದಲಾದ ಮುಖ್ಯ ಮಂತ್ರಿಗಳು ಆ ಪ್ರಯತ್ನಕ್ಕೆ ಸಾಕಷ್ಟು ಬೆಂಬಲ ನೀಡುವಲ್ಲಿ ಹಿಂದೇಟು ಹಾಕಿದ್ದರು. ಸಿ.ಪಿ.ಐ.(ಎಂ) ಮತ್ತು ಎಡ ಪಕ್ಷಗಳ ಪ್ರಯತ್ನದಿಂದಾಗಿ ಈಗ ಮತ್ತೆ ಅದರತ್ತ ಗಮನ ಹರಿಸುವಂತಾಗಿದೆ. ಆ ಕಾರಣದಿಂದಲೇ ದಿಲ್ಲಿ ಮತ್ತು ಬೆಂಗಳೂರಿನಲ್ಲಿ ಸೇರಿದ್ದ ಕಾಂಗ್ರೆಯೇತರ ಮುಖ್ಯಮುಂತ್ರಿಗಳ ಸಭೆ ಒಂಬತ್ತನೆಯ ವಿತ್ತ ಸಮಿತಿ ರಾಜ್ಯಗಳಿಗೆ ಹೆಚ್ಚು ಹಣ ಮಂಜೂರಿ ಮಾಡುವಂತಾಗಬೇಕೆಂದು ಕೇಂದ್ರ ಸರಕಾರದ ಮೇಲೆ ಒತ್ತಡ ತರಲು ಸಾಧ್ಯವಾಗಿದೆ.

ಮೂಲಭೂತವಾಗಿ ದೇಶದ ಸಂಪತ್ತನ್ನು ಕೇಂದ್ರ ಮತ್ತು ರಾಜ್ಯಗಳೊಳಗೆ ಸರಿಯಾಗಿ ಹಂಚುವ ಅಗತ್ಯವಿದೆ ಯಾದರೂ, ಆ ಸಮಸ್ಯೆ ಬಗೆ ಹರಿಯುವ ತನಕ, ರಾಜ್ಯಸರಕಾರಗಳು ತಮ್ಮಲ್ಲಿಯ ಸಂಪನ್ಮೂಲಗಳನ್ನು ಖರ್ಚು ಮಾಡುವಾಗ ಯಾವುದಕ್ಕೆ ಪ್ರಾಧಾನ್ಯತೆ ಕೊಡಬೇಕೆಂದು ನಿರ್ಣಯಿಸುವುದು ಅತ್ಯಗತ್ಯ, ಆ ದೃಷ್ಟಿಯಲ್ಲಿ ಕರ್ನಾಟಕ ಸತತ ಬಂಗಾಲ, ಮಳೆಯ ಅಭಾವಗಳನ್ನೆದುರಿಸುತ್ತಿರುವ ರಾಜ್ಯವಾಗಿರುವುದರಿಂದ, ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಮೀಸಲಿಡುವುದು ಅತ್ಯಗತ್ಯವಾಗಿತ್ತು. ಈ ವಿಷಯದಲ್ಲಿ ಜನತಾ ಸರಕಾರ ಪೂರ್ಣ ವಿಫಲಗೊಂಡಿದೆಂದರೆ ತಪ್ಪಾಗಲಿಕ್ಕಿಲ್ಲ.

ಕಾಂಗ್ರೆಸ್ ಮತ್ತು ಕೇಂದ್ರ ಸರಕಾರ ಕಾಂಗ್ರೆಯೇತರ ಸರಕಾರಗಳ ಮೇಲೆ ಸತತ ಅಪ ಪ್ರಚಾರ-ಧಾಳಿ ನಡೆಸಿರುವಾಗ ನಮ್ಮ ರಾಜ್ಯದ ಜನತಾ ಸರಕಾರದ ಮಂತ್ರಿಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬಹಿರಂಗವಾಗಿ ತೋಡಿಕೊಳ್ಳದೆ, ಅದನ್ನು ಬದಿಗಿರಿಸಿ, ಎಡ ಪಕ್ಷಗಳ ಸಹಕಾರದಿಂದ ಸಂಪನ್ಮೂಲಗಳನ್ನು ನೀರಾವರಿ ಮತ್ತಿನ್ನಿತರ ಅತ್ಯಾವಶ್ಯಕ ಅಭಿವೃದ್ಧಿ ಕಾರ್ಯಗಳಿಗೆ ವ್ಯಯ ಮಾಡುವ ಯೋಜನೆ ರೂಪಿಸಿಕೊಳ್ಳುವುದು ಯೋಗ್ಯವೆಂದು ನಮ್ಮ ಅನಿಸಿಕೆ. ದೇಶದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಅಂಥ ನಿಲುವೆ ಅತ್ಯಗತ್ಯ.

[1ನೇ ಪುಟದಿಂದ]

ಭಾರತೀಯ ಜನತೆಯ ಎಲ್ಲಾ ವಿಭಾಗಗಳನ್ನೂ ಸಿಟ್ಟಿಗೆಬ್ಬಿಸಿದೆ.ರಾಜೀವ್‌ಗಾಂಧಿ ತಮ್ಮ ನಿರೀಕ್ಷೆಗಳನ್ನು ಹುಸಿಗೊಳಿಸಿ ತಮ್ಮನ್ನಾಳುವ ಹಕ್ಕು ಕಳ ಕೊಂಡಿದ್ದಾರೆ ಎಂಬ ತೀರ್ಮಾನಕ್ಕೆ ಅವರು ಬಂದಿದ್ದಾರೆ. ಸಾರ್ವಜನಿಕ ಸಭೆಗಳು, ಮತ ಪ್ರದರ್ಶನಗಳು ಮತ್ತು ಬೇರೆ ರೀತಿಯ ಪ್ರತಿಭಟನೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ರಾಜೀವ್ ಗಾಂಧಿ ರಾಜೀನಾಮೆ ನೀಡಲೇಬೇಕು ಎಂದು ಎಲ್ಲಾ ಪ್ರತಿಪಕ್ಷಗಳು ಸಂಸತ್ತಿನಲ್ಲಿ ಹಾಗೂ ಹೊರಗೆ ಒತ್ತಾಯಿಸಿವೆ.

ಜನತೆಯ ಬೇಡಿಕೆಗಳು ಹಾಗೂ ಪ್ರತಿಭಟನೆಗಳಿಗೆ ಹೆಚ್ಚು ಸಂಘಟಿತ ಸ್ವರೂಪವೊಂದನ್ನು ನೀಡಬೇಕಾದ ಸಮಯವೀಗ ಬಂದಿದೆ ಎಂದು ಈ ಸಭೆ ಪರಿಗಣಿಸುತ್ತದೆ. ಜನತೆ ಎದುರಿಸುತ್ತಿರುವ, ಮುಖ್ಯವಾಗಿ ಬೆಲೆ ಏರಿಕೆ ದುಡಿಯುವ ಜನ ಎದುರಿಸುತ್ತಿರುವ ತಕ್ಷಣದ ಸಮಸ್ಯೆಗಳನ್ನು ಎತ್ತಿತೋರಿಸಲು ಹಾಗೂ ರಾಜೀವ್‌ಗಾಂಧಿಯ ಪದಚ್ಯುತಿಯ ಬೇಡಿಕೆಗೆ ಬೆಂಬಲವಾಗಿ ಸಮಸ್ತ ದೇಶವನ್ನು ಅಣಿನೆರೆಸಲು ಈ ಸಭೆ ಹೀಗೆ ನಿರ್ಧರಿಸಿದೆ.

(1) ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗುವ ದಿನ ದೇಶಾದ್ಯಂತ ವಿವಿಧ ಕೇಂದ್ರಗಳಲ್ಲಿ ರ್‍ಯಾಲಿಗಳನ್ನು ಸಂಘಟಿಸುವ ಮೂಲಕ ಮತ್ತು ನವದೆಹಲಿಯಲ್ಲಿ ಸಂಸತ್ತಿನೆದುರು ಜಂಟೀ ಮತ ಪ್ರದರ್ಶನದ ಮೂಲಕ "ಭಾರತ್ ಬಚಾವೋ"ದಿನಾಚರಣೆ.

(2) ಮಾರ್ಚ್ 15, 1988 ರಂದು ಭಾರತ ಬಂದ್‌ಗೆ ಕರೆ

ಈ ಬಂದ್‌ನ್ನು ಅತ್ಯಂತ ಯಶಸ್ವಿಗೊಳಿಸಬೇಕೆಂದು ಎಲ್ಲಾ ಜನ ವಿಭಾಗಗಳನ್ನು, ರಾಜಕೀಯ ಪಕ್ಷಗಳನ್ನು, ಕಾರ್ಮಿಕ ಸಂಘಗಳನ್ನು, ರೈತರ, ನೌಕರರ, ಯುವಕರ, ವಿದ್ಯಾರ್ಥಿಗಳ ಮತ್ತು ಮಹಿಳೆಯರ ಸಾಮೂಹಿಕ ಸಂಘಟನೆಗಳನ್ನು ಈ ಸಭೆ ವಿನಂತಿಸಿಕೊಳ್ಳುತ್ತದೆ.

ಸರಕಾರಿ ನೌಕರರ ಮುಷ್ಕರಕ್ಕೆ ಬೆಂಬಲ

ಕೇಂದ್ರ ಮಟ್ಟದ ವೇತನ, ಭತ್ಯೆಯಲ್ಲಿ ಸಮಾನತೆ ಶೇ. 8.33 ರಷ್ಟು ಬೋನಸ್, ಮೊದಲಾದ ಬೇಡಿಕೆಗಳ ಸಲುವಾಗಿ ಹಾಗೆಯೇ, ಆ ಬೇಡಿಕೆಗಳ ಪೂರೈಕೆಗೆ ಕೇಂದ್ರ ಸರಕಾರ ರಾಜ್ಯಕ್ಕೆ ಕೊಡ ಮಾಡುವ ಧನ ಸಹಾಯದಲ್ಲಿ ಸೇರಿಸಲು ಒಂಬತ್ತನೇ ಆರ್ಥಿಕ ಆಯೋಗ ಶಿಫಾರಸು ಮಾಡಬೇಕೆಂದೂ ಕೇಳಿ ರಾಜ್ಯ ಸರಕಾರಿ ನೌಕರರು ಫೆ. 10 ರಂದು ರಾಜ್ಯಾದ್ಯಂತ ಒಂದು ದಿನದ ಸಾಂಕೇತಿಕ ಮುಷ್ಕರ ಹೂಡಲಿದ್ದಾರೆ. ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ ಇತ್ತೀಚೆಗೆ ಬೆಂಗಳೂರಿನಲ್ಲಿ ಸಭೆ ಸೇರಿದಾಗ ಈ ಮುಷ್ಕರಕ್ಕೆ ಕರೆ ನೀಡಿತ್ತು. ದೇಶಾದ್ಯಂತ ಈ ಮುಷ್ಕರ ನಡೆಯಲಿದೆ. ಸಿ.ಐ.ಟಿ.ಯು, ರಾಜ್ಯ ಸರಕಾರಿ ನೌಕರರ ಬೇಡಿಕೆಗಳಿಗೆ ಹಾಗೆಯೇ ಸಂಕೇತಕ ಮುಷ್ಕರಕ್ಕೆಸಂಪೂರ್ಣ ಬೆಂಬಲ ನೀಡುತ್ತದೆ.

ಭಯೋತ್ಪಾದಕ ರಾಜಕೀಯದ ವಿಜಯ

(1ನೇ ಪುಟದಿಂದ)

ಹಿಂಬಾಲಕರು ಮತಗಟ್ಟೆಗಳ ಒಳಗೆ ನುಗ್ಗಿ ಮತ ಪತ್ರಗಳನ್ನು ಚೆಲ್ಲಾ ಪಿಲ್ಲಿ ಮಾಡಿದ ನಂತರ ಮರು ಎಣಿಕೆಯಲ್ಲಿ ಕಾಂಗ್ರೆ ಅಭ್ಯರ್ಥಿ ಜಯಿಸಿದ್ದಾನೆಂದು ಘೋಷಿಸಲಾಗಿದೆ.

ಚುನಾವಣೆಗೆ ಮೊದಲಿನ ಕೆಲವು ವಾರಗಳಲ್ಲಿ ಟಿ.ಎನ್.ವಿ. ಭಯೋತ್ಪಾದಕರು ನಡೆಸಿದ ಧಾಳಿಗಳು ಮತದಾರರಲ್ಲಿ ಭಯ ಹುಟ್ಟಿಸಲೆಂದೇ "ಯೋಜಿತ"ವಾಗಿದ್ದ ಧಾಳಿಗಳು ಇಂತಹ ವಾತಾವರಣವನ್ನು ಸೈನ್ಯವನ್ನು ಕಳುಹಿಸಿ, ಜನರ ರಕ್ಷಕ ನೆಂಬಂತೆ ತೋರ್ಪಡಿಸಿಕೊಳ್ಳಲು ಕಾಂಗ್ರೆಗೆ ಸಹಾಯಕವಾಯಿತು ಎಂದು ಪಿ.ಬಿ. ಹೇಳಿದೆ.

ಕಾಂಗ್ರೆಸ್ (ಐ) ಗೆಲ್ಲಬೇಕೆನ್ನುವ ತನ್ನ ದುರ್ಬಯಕೆಗಾಗಿ ಎಲ್ಲಾ ಸಂವಿಧಾನಿಕ ಹಾಗೂ ಪ್ರಜಾಸತ್ತಾತ್ಮಕ ರೀತಿ ನೀತಿಗಳನ್ನು ಹೇಗೆ ಗಾಳಿಗೆ ತೂರುತ್ತದೆಂಬುದು ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ವಿರೋಧಿ ಶಕ್ತಿಗಳ ಕಣ್ಣು ತೆರೆಯಲು ಕಾರಣವಾಗಬೇಕು. ಈ ವಿಜಯದಿಂದ ಹುಚ್ಚೆದ್ದು ಕುಣಿಯುವ ಕಾಂಗ್ರೆ ತ್ರಿಪುರಾದ ಜನತೆಯ ಮೇಲೆ, ಮುಖ್ಯವಾಗಿ ಸಿ.ಪಿ.ಐ. (ಎಂ) ಕಾರ್ಯಕರ್ತರ ಮೇಲೆ ಘೋರ ಧಾಳಿಯನ್ನು ಎಸಗುವ ಸಂಭವವಿದೆ. ಇಂತಹ ಪ್ರತೀಕಾರ ಕ್ರಮಗಳನ್ನು ಕೈಗೊಳ್ಳದಿರಿ ಎಂದು ಕಾಂಗ್ರೆಗೆ ಎಚ್ಚರಿಸುವುದು ಎಲ್ಲಾ ಪ್ರಜಾಸತ್ತಾತ್ಮಕ ವಿರೋಧಿ ಶಕ್ತಿಗಳು ಹಾಗೂ ಎಡ ಶಕ್ತಿಗಳ ಕರ್ತವ್ಯ ಎಂದು ಪಿ.ಬಿ. ಹೇಳಿಕೆ ತಿಳಿಸಿದೆ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone · 75331 UMA Printers B-53 Editor : P. Ramachandra Rao Managing Editor : N. K. Upadhyaya